(b) In view of the reply furnished to clause (a) above this question does not arise.

(c) In view of the replies furnished to clauses (a) and (b), this question does not arise.

CALLING ATTENTION TO MATTERS OF URGENT PUBLIC IMPORTANCE

Re. Scarcity of Drinking water in Kanakatte Village.

Sri H. S. SIDDAPPA (Arsikere).— I call the attention of the Minister for Community Development and Social Welfare to the Scarcity of drinking water and about a well where people are dieing.

Sri M. MALLIKARJUNASWAMY (Minister for Community Development and Social Welfare).— The latter portion is not there in the Calling Attention matter sent by the Hon. Member. Anyway I will make the following Statement:

Kanakatte village in Arasikere taluk, has 3 Drinking Water Wells at present and the villagers are using water from these 3 wells. Another Drinking water well was sanctioned during the year 72-73 in the Southern extension of the village at an estimated cost of Rs. 9,990/-. The outlay incurred on this well so far is Rs. 2,850/- and the well has been sunk upto a depth of 12 metres. Sufficient water is also stated to have been tapped. Steining and the parapet have got to be constructed. Since the Contractor abandoned the work 3 months ago, a separate Contractor has been entrusted with the remaining portion of the work. The Deputy Commissioner has reported that the Drinking Water Well would be got completed within 2 months. It has also been reported that no cattle or animals have fallen in this well. The Chairman of the V.P.Kanakatte has been requested to arrange for proper fencing till the completion of the well.

National Rural Water Supply Scheme to this village has also been sanctioned for Rs. 81,000/- during 67-68, but the work could not be taken up for execution since the panchayat did not pay the 10% contribution till August 1972.

Tenders were invited by the Executive Engineer on 28-9-72. 3 Bore wells have been sunk out of which one well has failed. Construction of pump houses over the successful bore wells has been completed. The work of construction of RCC overhead tank of 25,000 litres capacity has been entrested to a Contractor and sufficient materials have been collected. An expenditure of Rs. 38,990/– has so far been incurred on the scheme. There was also a dispute with regard to handing over the site for the construction of RCC overhead tank. The V. P. has since given consent in writing on 16-9-73 for handing over possition of the land required to the PHE Department. The Dy. Commissioner has stated that he would take necessary action to see that the site is handed over by the Panchayat to the PHE Department and would pursue till the completion of the work.

Kanakatte village is however free from water scarcity.

2-00 P. M.

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್ ಮೆಂಟಿನಲ್ಲಿ ಈ ಕಣಕಟ್ಟೆ ಹಳ್ಳಿಗೆ ಒಂದು ಬಾವಿಯನ್ನು ತೆಗೆಯುವುದಕ್ಕೆ ೯೯೦ ರೂಪಾಯಿಗಳು ಮಂಜೂರು ಆಗಿದೆ, ಆ ಹಣದಲ್ಲಿ ಆ ಬಾವಿಯನ್ನು ತೆಗೆಯುವುದಕ್ಕೆ ಈಗಾಗಲೇ ೨, ೫೦ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ಈ ಹಣವನ್ನು ಮಂಜೂರು ಮಾಡಿದ್ದು ಯಾವಾಗ, ಇಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಎಷ್ಟು ವರ್ಷ ಆಯಿತು? ಮಂತ್ರಿಗಳಾಗಲೀ, ಸರ್ಕಾರವಾಗಲೀ ಒಂದು ಯೋಜನೆಯನ್ನು ಮಂಜೂರು ಮಾಡಿದ ಮೇಲೆ ಎಷ್ಟು ವರ್ಷಗಳಲ್ಲಿ ಅದು ಕಾರ್ಯಗತವಾಗಿ ಅದರಿಂದ ಜನಗಳಿಗೆ ಸೌಲಭ್ಯ ಸಿಕ್ಕುತ್ತದೆ? ವರ್ಷಾನುಗಟ್ಟಲೆ ಇದನ್ನು ಕಾರ್ಯಗತ ಮಾಡದೇ ಹೋದರೆ ಹೇಗೆ? ಪಂಚಾಯಿತಿಯವರು ತಮ್ಮ ಭಾಗದ ೧೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟಿಲ್ಲ ಆದ್ದರಿಂದ ಈ ಬಾವಿಯ ಕೆಲಸ ತಡವಾಯಿತು ಎಂದು ಹೇಳಿದ್ದೀರಿ, ಪಂಚಾಯಿತಿಯವರು ತಮ್ಮ ಭಾಗದ ಹಣವನ್ನು ಕೊಟ್ಟು ಮೂರೂವರೆ ವರ್ಷವಾಗಿದೆ. ನಾನು ಮತ್ತು ಡೆಪ್ಯೂಟಿ ಕಮಿಷನರು ಆ ಸ್ಥಳಕ್ಕೆ ಹೋಗಿ ಹಣವನ್ನು ಕೂಡಿಸಿದ್ದೇವೆ. ಆ ಊರಿನಲ್ಲಿ ನಾವು ಮನೆ ಮನೆಗೆ ಹೋಗಿ ಒಂದೊಂದು ಮನೆಗೆ ೫ ರೂಪಾಯಿಗಳಂತೆ ಕಲೆಕ್ಟ್ ಮಾಡಿ ಪಂಚಾಯಿತಿಯ ಹಣವನ್ನು ಸರ್ಕಾರಕ್ಕೆ ಕೊಟ್ಟು ೩–೪ ವರ್ಷಗಳಾಗಿದೆ. ಜನಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರದವರಿಗೆ ಅನುಕಂಪ ಬಾರದೆ ಹೋದರೆ ಜನ ಏನು ಮಾಡಬೇಕು? ಆ ಬಾವಿಯಲ್ಲಿ ದನಗಳು ಮತ್ತು ಪ್ರಾಣಿಗಳು ಬಿದ್ದು ಸಾಯು

ತ್ತಿವೆ. ಆದ್ದರಿಂದ ಆ ಬಾವಿಗೆ ದನಗಳು ಮತ್ತು ಪ್ರಾಣಿಗಳು ಬಿದ್ದು ಸಾಯದೇ ಹೋಗಿದ್ದರೆ ಅದಕ್ಕೆ ಫೆನ್ಸಿಂಗ ಏತಕ್ಕೆ ಹಾಕಿದ್ದಾರೆ? ಬಾವಿ ತೆಗೆದು ಅದಕ್ಕೆ ಸುತ್ತಲೂ ಕಟ್ಟಿ ಕಟ್ಟದೇ ಹೋದರೆ ಅದಕ್ಕೆ ದನಗಳು ಮತ್ತು ಪ್ರಾಣಿಗಳು ಬಂದು ಬೀಳುವು ದಿಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಡೆಪ್ಯೂಟಿ ಕಮಿಷನರು ಏನು ಹೇಳುತ್ತಾರೆಯೋ ಅದನ್ನೇ ನಂಬಿಕೊಳ್ಳಬೇಡಿ. ಮಾನ್ಯ ಮಂತ್ರಿ ಗಳು ಬರೀ ಸಮಾರಂಭಗಳಿಗೆ ಹೋಗುವುದನ್ನು ಬಿಟ್ಟು ಹಳ್ಳಿಗೆ ಬಂದು ಈ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಈಗಾಗಲೇ ನಾನು ಮಾನ್ಯ ಸದಸ್ಯರಿಗೆ ಉತ್ತರ ರೂಪವಾಗಿ ನನ್ನ ಸ್ಟೇಟ್‌ಮೆಂಟಿನಲ್ಲಿ ಈ ವಿಚಾರದಲ್ಲಿ ಹೇಳಿದ್ದೇನೆ. ೧೯೭೨–೭೩ ರಲ್ಲಿ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು ಎಂದು ಆ ಬಾವಿಗೆ ೯೯೯೦ ರೂಪಾ ಯಿಗಳನ್ನು ಮಂಜೂರು ಮಾಡಿದೆ. ಈ ಬಾವಿ ಎನ್. ಆರ್. ಡಬ್ಲ್ಯು. ಸ್ಕೀಮಿಗೆ ಸಂಬಂಧಪಟ್ಟದ್ದಲ್ಲ ಆ ಬಾವಿ ಬೇರೆ ಬಾವಿ. ಈ ಬಾವಿಯನ್ನು ತೆಗೆಯುತ್ತಿದ್ದ ಕಂಟ್ರಾಕ್ಟರು ಅಬ್ಯಾಂಡನ್ಡ್ ಮಾಡಿ ಹೋಗಿದ್ದಾನೆ. ಇತ್ತೀಚೆಗೆ ಆ ಕೆಲಸವನ್ನು ಬೇರೆ ಕಂಟ್ರಾಕ್ಟರಿಗೆ ಎಂಟರೆಸ್ಟ ಮಾಡಿ ಇನ್ನು ಎರಡು ತಿಂಗಳಲ್ಲಿ ಪೂರ್ತಿ ಮಾಡು ತ್ತೇವೆ ಎಂದು ಡೆಪ್ಯೂಟಿ ಕಮೀಷನರು ವರದಿ ಮಾಡಿದ್ದಾರೆ. ಅಲ್ಲಿ ಓವರ್ ಹೆಡ್ ಟ್ಯಾಂಕ ಕಟ್ಟಿಸುವ ಪದಕ್ಕೆ ಗಲಾಟೆ ಇತ್ತು. ಈಗ್ಗೆ ೮ ದಿವಸಗಳಿಂದೀಚೆಗೆ ಆ ಊರಿನ ಪಂಚಾಯಿತಿಯವರು ಆ ಓವರ್ ಹೆಡ್ ಕಟ್ಟುವುದಕ್ಕೆ ಅನುಮತಿಯನ್ನು ಕೊಟ್ಟು ಸೈಟನ್ನು ಕೊಟ್ಟಿದ್ದಾರೆ. ಪಂಚಾಯಿತಿಯವರು ವಿಚಕ್ಷಣೆಯಿಂದ ತಾವು ಕೊಡ ಬೇಕಾದ ಹಣವನ್ನು ಕೊಡದೇ ಹೋದುದರಿಂದ ಕಂಟ್ರಾಕ್ಟರು ತಮ್ಮ ಕೆಲಸವನ್ನು ಮಾಡದೇ ಹೋದುದರಿಂದ ಇದು ನಿಧಾನವಾಗಿದೆ. ಆ ಬಾವಿಯಲ್ಲಿ ನೀರೇ ಇಲ್ಲ. ಹೀಗಿರುವಾಗ ಅದರಲ್ಲಿ ದನಗಳು ಬಿದ್ದಿವೆ, ಪ್ರಾಣಿಗಳು ಬಿದ್ದಿವೆ ಎಂದು ಹೇಳಿದರೆ ಹೇಗೆ? ಮಾನ್ಯ ಸದಸ್ಯರು ಏನು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಕಳು ಹಿಸಿದ್ದಾರೆ ಅದರಲ್ಲಿ ದನಗಳು ಸಾಯುವುದು ಪ್ರಾಣಿಗಳು ಸಾಯುವುದು ಯಾವುದೂ ಇಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.— ಮಾನ್ಯ ಮಂತ್ರಿಗಳು ಆ ಬಾವಿ ಇರುವ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರುತ್ತಾರೆಯೇ?

ಶ್ರೀ ಎಂ ಮಲ್ಲಿಕಾರ್ಜುನ ಸ್ವಾಮಿ.— ನಾನು ಅದನ್ನು ಹೋಗಿ ನೋಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ನನ್ನ ಜೊತೆಗೆ ಬರುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಸಮಯ ಸಿಕ್ಕಿದಾಗ ಬರುತ್ತೇನೆ. ಮಂತ್ರಿ, ಗಳೇ ಪ್ರತಿಯೊಂದು ಹೋಗಿ ನೋಡುವುದಕ್ಕಾಗುವುದಿಲ್ಲ. ಅಧಿಕಾರಿಗಳಿಂದ ವರದಿ ಯನ್ನು ತರಿಸಿಕೊಳ್ಳುತ್ತೇವೆ.

ಶ್ರೀ ಎಚ್. ಎಸ್ ಸಿದ್ದಪ್ಪ.—ನಿಮ್ಮ ಆಡಳಿತ ಯಂತ್ರ ಏನಿದೆ ಅದು ಮುರಿದು ಹೋಗಿದೆ. ಅಲ್ಲಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಲ್ಲಿ ನೀರಿನ ಕೊರತೆ ಇದೆಯೆಂದು ಹೇಳುವುದು ಸರಿಯಲ್ಲ. ಅಲ್ಲಿ ಜನ ನೀರನ್ನು ಉಪಯೋಗಿಸುತ್ತಿದ್ದಾರೆ. ಈಗ ಅಲ್ಲಿ ಬಾವಿಯಲ್ಲಿ ನೀರು ಇದೆ ಎಂದು ವರದಿ ಬಂದಿದೆ. ವರದಿ ತಪ್ಪು ಇದ್ದರೆ ಅದನ್ನು ನಾನು ಖುದ್ದಾಗಿ ಹೋಗಿ ನೋಡುತ್ತೇನೆ.

Re:Non filling of Posts of teachers in High Schools of Hassan District

Sri K. H. HANUME GOWDA.—I call the attention of the Minister for Education to the Non-filling of posts of teachers in High Schools of Hassan District.

Sri A. R. BADARINARAYAN (Minister for Education).—This may require some detailed information about 100 Schools. I have not got full information about all these Schools. Therefore, I may be permitted to have 3 days time for collection of the details.

(iii) Re: Non-appointment of Kannadigas in the Institute of Management, Bangalore.

Sri H. S. SIDDAPPA.—I call the attention of the Minister for labour to the non-appointment of Kannadigas in the Indian Institute of Management, Bangalore.

Sri A. R. BADARINARAYANA.—On behalf of the Minister for Labour, I read the following statement.

The Indian Institute of Management is the third Management Institute in the Country, the first two being at Ahmedabad and Calcutta established a decade ago. As the Central Government were contemplating to start two more such Institutes- one in the Northern Region and the other in the Southern Region, the State Government pursuaded the Government of India for location of the Institute meant for the Southern Region at Bangalore.

The Indian Institute of Management at Bangalore is a Central Institute, the expenditure on which will be borne entirely by the Central Government. However, in con-

sideration of its location at Bangalore, State Government have agreed to grant 100 acres of land free of cost out of the lands available with the Bangalore University in its new Campus and to the payment of grant aggregating to Rs. 30 lakhs for the initial establishment and development of the Institute. A grant of Rs. 10 lakhs has been released to the Institute so far. The responsibility for the establishment, administration and management of the Institute vests with a Society Registered under the Mysore Societies Registration Act, 1960. The Society was registered at Bangalore on 27-3-1972. The day-to-day administration of the Society vests in the Governing Body of the Society which is called the Board of Governors. The Board of Governors consists of members representing business, industry, professions and trade Unions as well as Central and State Government nominees. Sri T. A. Pai, Union Cabinet Minister is the Chairman of the first Member of the Governing Body of the Society. The Development Commissioner, the Financial Commissioner and the Commissioner of Education are the State Government nominees on the Governing Body which consists of 18 members. The other members from Mysore State on the Board of Governors are Sri K. Pandrunga Setty, Technical Director, Sri Krishna Flour Mills, Bangalore, Dr. S. M. Patil, Chairman and Managing Director, H. M. T. Ltd., Bangalore Dr. H. Narasimiah, Vice-Chancellor, Bangalore University, Bangalore, Professor V.K.R.V. Rao, M.P. and Sri A. Krishnamurthy, Jayanagar, Bangalore. The State has thus been able to get adequate representation to the Mysore Government as well as persons from Mysore State. The interests of the State are thus well protected by the fact that the structure of the Board takes care of our interests.

Under Rule 12 (ix) of the Rules of the Society, Board of Governors have powers to create teaching, administrative, technical, ministrial and other posts in the Institute other than the post of Director and to make appointments thereto provided that the posts created are in the cadre and scales of pay as approved by the Central Government from time to time. The appointment to the post of the Director

shall be made by the Board according to such procedure and on such terms and conditions as may be decided by the Central Government.

Thus appointments to the posts in the Institute are within the exclusive Jurisdiction of the Board of Governors. It was in this context, that the State Government had to withdraw the stay order issued to the Institute in connection with certain appointments proposed to be made by it.

Being a National Institute established by the Government of India through the Ministry of Education, all policies of recruitment and programmes and other activities of the Institute will be national in character. It would adopt a national policy with regard to the recruitment to the faculty and senior administrative positions, as well as selection to the academic programmes. The Institute is an autonomous body registered under the Societies Act and is administered by a Board of Governors.

Management Education is relatively a recent development in India. Since facilities for advance Management Education is still not developed adequately, there is great deal of difficulty in obtaining suitable candidates for Faculty positions. Faculty trained abroad are able to get excellant job opportunity both in the private sector and in Governmental agencies. Consequently, there is a severe shortage of Management teachers in India. The situation at present is not one of too many qualified candidates seeking too few opportunities, but is one of the Institutes of Management and related bodies competing to get suitable candidates.

Faculty and other Senior positions are extensively advertised in the National News papers.

Besides, they are published in the bulletins issued by the Indian Missions abroad, particularly in USA, Canada and U. K. Over 500 applications have been received. All these have been categorised and analysed by the Director of the

Institute and list prepared giving details of the candidate's qualifications and experience. These lists are provided to the Members of the Selection Committee.

Selection is done by a Selection Committee, nominated by the Board. Members of the present selection Committee are–

1.	Dr. L. S. Chandrakant, Director, Institute of Applied Manpower Research, New Delhi.	Chairman.
2.	Sri M. K. Panduranga Setty, Technical Director, Krishna Flour Mill, Bangalore.	Member.
3.	Dr. S. M. Patil, Chairman, H. M. T., Ltd., Bangalore.	-do-
4.	Prof. N. S. Ramaswamy, Director, Indian Institute of Management, Bangalore.	-do-
5.	Sri S. Santhanam, Managing Director, Amco Batteries Ltd., Bangalore.	Experts**
6.	Sri K. R. S. Gowda, General Manager, Machine Tools Factory, H. M. T., Ltd., Bangalore,	Expert.
7.	Sri S. S. Rangnekar, Chief Executive, Searle (India) Ltd., Bombay.	Expert.
8.	Dr. L. S. Kanodia, General Manager, Datamatics Corpn., Ltd., Bombay.	Expert.
9.	Dr. S. K. Parukh Beam Services, Bombay.	Expert.

In April and May last, the Selection Committee recommended candidatures of 32 candidates for 20 positions. Of these, only 3 have joined so far. About 6 are likely to join by the end of this year. 8 have declined and the Director is negotiating with the rest.

(**Experts in various fields of Management drawn from a panel approved by the Chairman and Board)

Recently, in September the Selection Committee held two meetings and recommended candidatures of 17 more candidates for approval to the Board.

Out of 49 candidates recommended by the Selection Committee 28 are residing abroad. Usually candidates working abroad need one year advance notice and they take anything between 6 months to 2 years to join after accepting the offer. They are interviewed by the Director as has been the practice in other institutions also. His recommendations as well as the recommendations of the referees are placed before the Selection Committee. After due deliberation the Selection Committee recommends the final list of the candidates to be selected. The Director thereafter negotiates the terms and conditions:

Depending on the availability of resources and priority of programmes, candidates are called for interview for consideration. Thus all the applications are categorised not only as per the field specialised but also in terms of immediate interest, long term interest and no interest etc. Such analyses are also being made available to the Chairman of the Board as well as Members of the Selection Committee.

It can thus be seen that all the Conventional rules and procedures are strictly adhered to by the Institute. The selection Committee consists of distinguished persons who have a anational standing and who have extensive experience in selection of faculty and senior administrative staff. Therefore, there is no possibilty of partisanship, partiality being shown to any community, caste, or language group. An Institute of this kind has to base its selection entirely on merit and scholarship if it has to make a name for itself and contribute to the knowledge in the Management field.

There are 26 members on the Administrative staff. Twenty-five of these positions are filled in by persons of Karnataka domicile and the 26th person is an ex-service man, who has worked in Karnataka for a number of years.

In our efforts to persuade the Central Government to locate the Institute in Bangalore, the State have promised

a lumpsum amount of Rs. 30 lakhs as well as free land. Such facilities are offered by other States to similar institutions. This does not give the State Government control over it directly. The State can only influence the work of the Institute through its nominees and as indicated earlier there are eminent persons from the State who would look after the interests of the State.

ಶ್ರೀ ಎಚ್. ಎಸ್. ಸಿದ್ದಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇದುವರೆಗೆ ಹೇಳುವುದನ್ನೆಲ್ಲಾ ಹೇಳಿದರು.

ಶ್ರೀ ಎ. ಆರ್. ಬದರೀನಾರಾಯಣ — ಏತಕ್ಕೆ ಹೇಳಬಾರದು ?

ಶ್ರೀ ಎಚ್. ಎಸ್. ಸಿದ್ದಪ್ಪ.— ಹೇಳಬಾರದ ಎಂದು ನಾನು ಹೇಳುವುದಿಲ್ಲ. ನೀವು ನನಗೆ ತಾತನ ಸಮಾನ. ನಾನು ನಿಮ್ಮ ಮೊಮ್ಮಗನಾಗಿ, ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನಾನು, ನೀವು ಮತ್ತು ಅಧ್ಯಕ್ಷರು ಈಗಾಗಲೇ ಆಲ್ಲಿಗೆ ಹೋಗೋಣ. ಅಲ್ಲಿ ಕನ್ನಡಿಗರಿಗೆ ಏನಾದರು ಪ್ರಾಧಾನ್ಯತೆ ಕೊಟಿದ್ದಾರೆ, ಕೆಲಸಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಅಧ್ಯಕ್ಷರು ಒಪ್ಪಿಕೊಂಡುಬಿಟ್ಟರೆ ನಾನು ಯಾವ ಪ್ರಶ್ನೆಗಳನ್ನು ಕೇಳುವುದಿಲ್ಲ. ಇಷ್ಟಾದರೂ ತಾವು ಒಪ್ಪಿಕೊಳ್ಳುತ್ತೀರಾ ?

Sri A. R. BADARINARAYANA.— Unfortunately, these things are not decided by such Committees.

ಶ್ರೀ ಎಚ್. ಎಸ್. ಸಿದ್ದಪ್ಪ.— ತಮ್ಮ ಕಷ್ಟವನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಿದ್ದರೆ ತಾವು ಕೊಟ್ಟಿರುವ ೩೦ ಲಕ್ಷ ರೂಪಾಯಿಗಳನ್ನು ಮತ್ತು ನೂರು ಎಕರೆ ಜಮೀನನ್ನು ವಾಪಸ್ ತೆಗೆದುಕೊಳ್ಳಿ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಹೇಳುವುದನ್ನು ಪೂರ್ತಾ ಕೇಳಿ.

ಶ್ರೀ ಎಚ್. ಎಸ್. ಸಿದ್ದಪ್ಪ.— ನಾನು ಪ್ರಶ್ನೆಯನ್ನು ಪೂರ್ತಿಯಾಗಿ ಇನ್ನೂ ಕೇಳಿಲ್ಲ.

ಅಧ್ಯಕ್ಷರು.— ಹಾಗಾದರೆ ಪೂರ್ತಿಯಾಗಿ ಕೇಳಿಬಿಡಿ.

ಶ್ರೀ ಎಚ್. ಎಸ್. ಸಿದ್ದಪ್ಪ.— ನಾನು ಹೇಳುತ್ತಿರುವುದು ಸರಿಯಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದೇ ರೀತಿ ಮುಂದುವರಿದರೆ ನಮ್ಮ ಮಕ್ಕಳ ಗತಿ ಏನು ? ನನ್ನ ಮೊಮ್ಮಕ್ಕಳ ಗತಿ ಏನು ? ನಾನು ಹೇಳುತ್ತಿರುವುದು ತಪ್ಪು ಎನ್ನುವುದಾದರೆ ನನ್ನ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ.

Sri A. R. BADARINARAYANA.— Madam, this is a National Institute of very great importance.....

ಶ್ರೀ ಎಚ್. ಎಸ್. ಸಿದ್ದಪ್ಪ.— ಇದು ನ್ಯಾಷನಲ್ ಇನ್ಸ್‌ಟಿಟ್ಯೂಟು, ಇದರಲ್ಲಿ

ರಾಷ್ಟ್ರೀಯ ಭಾವನೆ ಬರಬೇಕು ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಇದರಲ್ಲಿ ನಮ್ಮ ರಾಜ್ಯದ ಜನರನ್ನು ಬಿಟ್ಟು ಬೇರೆಯವರಿಗೆ ಹೆಚ್ಚು ಅವಕಾಶಗಳನ್ನು ಮಾತ್ರ ಕೊಡಬೇಕೆಂದೇನಾದರೂ ಇದೆಯೇ ? ಇದರಲ್ಲಿ ಇರುವುದು ಎಂತಹ ನ್ಯಾಷನಲ್ ಪಾಲಿಸಿ ? ನಮಗೆ ಅರ್ಥವಾಗುತ್ತಿಲ್ಲ. ಹೀಗಾದರೆ ನಮ್ಮ ಮಕ್ಕಳು ಹಾಗೂ ನಮ್ಮ ಮಕ್ಕಳ ಗತಿಯೇನಾಗಬೇಕು ? ನಮ್ಮ ರಾಜ್ಯದವರು ಇದಕ್ಕಾಗಿ ಹಣ ಕೊಡುವಾಗ ಇದರಲ್ಲಿ ನಮ್ಮ ರಾಜ್ಯದ ಜನತೆಗೆ ಅನುಕೂಲಮಾಡಬೇಕಾದು ನಮ್ಮ ಕರ್ತವ್ಯವಲ್ಲವೇ ? ಇದಕ್ಕಾಗಿ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ತಮ್ಮಲ್ಲಿರುವ ರಾಷ್ಟ್ರೀಯ ಮನೋಭಾವನೆಯನ್ನು ಸ್ವಲ್ಪ ತಗ್ಗಿಸಿ. ನಾವೇನೋ ನಿಮ್ಮಿಂದ ಬಹಳ ಒಳ್ಳೆಯ ಕೆಲಸಗಳಾಗುತ್ತವೆ ಎಂದು ನಿರೀಕ್ಷಿಸಿದ್ದೇವೆ ನಮ್ಮ ರಾಜ್ಯದ ಜನರ ಮಕ್ಕಳಿಗೆ ಅನ್ಯಾಯ ಮಾಡಲು ಹೋಗಬೇಡಿ. ಇದಕ್ಕಾಗಿ ನಾನು ತಮ್ಮಲ್ಲಿ ಸಲಹೆ ಮಾಡುವುದು ನಮ್ಮ ಸದನದ ಅಧ್ಯಕ್ಷರು, ನೀವು ಹಾಗೂ ನಾನು ಹೀಗೆ ನಾವು ಮೂರು ಜನರೂ ಅಲ್ಲಿಗೆ ಹೋಗಿ ನೋಡಿಕೊಂಡು ಬಂದರೆ ಅಲ್ಲಿ ಎಷ್ಟು ಅನಾಹುತಗಗಳಾಗುತ್ತಿವೆ ಎನ್ನುವುದನ್ನು ಕಣ್ಣಾರೆ ನೋಡಿ ಬರಹುದು. ಇದನ್ನಾದರೂ ತಾವು ಒಪ್ಪುತ್ತೀರಾ ? ಇದರಲ್ಲಿ ಎಷ್ಟು ಅನ್ಯಾಯವಾಗಿದೆ ಎಂದರೆ ಯಾರೋ ಒಬ್ಬರು ಇಂಡಾಲಿಯಂ ಫ್ಯಾಕ್ಟರಿಯಲ್ಲಿದ್ದವರನ್ನು ಇಲ್ಲಿಗೆ ತಂದು ಅವರನ್ನು ಪ್ರೊಫೆಸರಾಗಿ ಮಾಡಿದ್ದಾರೆ. ಹೀಗೆ ಮಾಡಲು ಇವರಲ್ಲಿದ್ದಂತಹ ಕ್ವಾಲಿಫಿಕೇಷನ್ನಾದರೂ ಏನು ಇತ್ತು ? ಇದರಲ್ಲಿ ಯಾವ ನ್ಯಾಷನಲ್ ಪಾಲಿಸಿ ಇರುವುದು ? ಇದಕ್ಕಾಗಿ ಸರಕಾರ ಇದರಲ್ಲಿ ಹಸ್ತಕ್ಷೇಪ ಮಾಡಬೇಕೆಂದು ಹೇಳುತ್ತಿರುವುದು. ಇದಕ್ಕಾಗಿ ನಾನು ನಿಮ್ಮಲ್ಲಿ ಕೇಳುವುದು ಇವರಿಗೆ ಕೊಟ್ಟಿರುವ ನೂರು ಎಕರೆಗಳ ಜಾಗವನ್ನು ಹಾಗೂ ೩೦ ಲಕ್ಷದಷ್ಟು ಹಣವನ್ನು ವಾಪಸು ಪಡೆಯಿರಿ. ಇದರಿಂದ ನಮ್ಮ ಜನತೆಗೆ ಹಾಗೂ ಅವರ ಮಕ್ಕಳಿಗೇನೂ ಉಪಯೋಗವಾಗುವುದಿಲ್ಲ ? ಇದನ್ನು ಒಪ್ಪುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.— ಇದೊಂದು ರಾಷ್ಟ್ರೀಯ ಸಂಸ್ಥೆ. ಇದರಲ್ಲಿ ಬಹಳ ಹೆಸರಾಂತ ಟೆಕ್ನಿಕಲ್ ಪೀಪಲ್‌ಗಳಿದ್ದಾರೆ. ಇದರಲ್ಲಿರುವ ಟೆಕ್ನಿಕಲ್ ಪರ್ಸನ್ಸ್ ಸೇರಿಕೊಂಡು ಒಂದು ಸೆಲೆಕ್ಟ್ ಕಮಿಟಿ ಎಂದು ಮಾಡಿದ್ದಾರೆ, ಅವರುಗಳು ಎಲ್ಲವನ್ನು ವಿವೇಚನೆಮಾಡಿ ನೇಮಕಗಳನ್ನು ಮಾಡುತ್ತಾರೆ. ಇದೊಂದು ಹೊಸದಾದ ಮ್ಯಾನೇಜುಮೆಂಟು ಸಂಸ್ಥೆ. ಇದರಲ್ಲಿ ಸಾಕಾದಷ್ಟು ಮಂದಿ ಟೆಕ್ನಿಕಲ್ ಟ್ರೇನ್ಡ್ ಪೀಪಲ್‌ಗಳಿದ್ದಾರೆ ಮತ್ತು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಇಲ್ಲಿನ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ ಎಂದರು. ಅಂತಹ ವಿಚಾರಗಳೇನಾದರೂ ಇದರಲ್ಲಿ ಇವೆ ಮತ್ತು ದೋಷಗಳಿವೆ ಎಂದು ಹಾಗೂ ಅವರು ಮಾಡಿರುವ ಕೆಲಸಗಳು ಸರಿಯಾಗಿಲ್ಲ ಎನ್ನುವುದನ್ನು ಸರಕಾರದ ಗಮನಕ್ಕೆ ನಿರ್ದಿಷ್ಟವಾಗಿ ತೆಗೆದುಕೊಂಡು ಬಂದರೆ ಆಗ ಸರಕಾರ ಏನು ಕ್ರಮ ತೆಗೆದುಕೊಳ್ಳಬಹುದೋ

ಅದನ್ನು ತೆಗೆದುಕೊಂಡು ಅವರಿಗೂ ಸೂಕ್ತ ನಿರ್ದೇಶನಗಳನ್ನು ಕೊಡಲು ಸಹಾಯ ವಾಗುತ್ತದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.— ಇದಕ್ಕಾಗಿ ನಾನು ತಮ್ಮಲ್ಲಿ ಸಲಹೆ ಮಾಡು ವದು. ತಾವು ಹಾಗೂ ನಮ್ಮ ಅಧ್ಯಕ್ಷರು ಮತ್ತು ನಾನು ಮೂವರೂ ಕೂಡಿಕೊಂಡು ಇಂದು ಇಲ್ಲವೇ ನಾಳೇನೇ ಈ ಸಂಸ್ಥೆಗೆ ಹೋಗಿ ನೋಡಬಹುದು ಇದು ಬೆಂಗಳೂ ರಿನಲ್ಲೇ ಇದೆ. ಇದಕ್ಕಾದರೂ ಒಪ್ಪುತ್ತೀರಾ ? ಇದರ ಬಗ್ಗೆ ಹಿಂದೆ ಕೋರ್ಟ್‌ನಲ್ಲಿ ಸೆಲೆಕ್ಷನ್ ಕಮಿಟಿ ಸರಿಯಾಗಿ ಕೆಲಸ ಮಾಡಿಲ್ಲ ಎಂದು ಅದರ ಮೇಲೆ ಸ್ಟೇ ಆರ್ಡರು ಕೂಡ ಬಂದಿತ್ತು. ಅದನ್ನು ಆ ನಂತರ ವಾಪಸು ಬೇರೆ ತೆಗೆದುಕೊಳ್ಳಲಾಯಿತು. ಅಂತಹವರನ್ನೇ ಇಲ್ಲಿ ಮತ್ತೆ ಡೈರೆಕ್ಟರಾಗಿ ನೇಮಕ ಮಾಡಿದ್ದಾರೆ. ಇದಕ್ಕಾಗಿ ನಿಮ್ಮ ಸರಕಾರ ಕ್ರಮ ತೆಗೆದುಕೊಳ್ಳಲು ಆಗದಿದ್ದರೆ ನಾವು ಅವರಿಗೆ ಕೊಟ್ಟಿರುವ ೩೦ ಲಕ್ಷ ರೂಪಾಯಿಗಳ ಹಣ ಹಾಗೂ ನೂರೂ ಎಕರೆ ಜಾಗವನ್ನು ಏಕೆ ವಾಪಸು ಪಡೆಯಬಾರದು ?

ಶ್ರೀ ಕೆ. ಹೆಚ್. ಕನುಮೇಗೌಡ.— ಇಂಡಿಯನ್ ಅಲ್ಯೂಮಿನಿಯಂ ಕಂಪನಿ ಯಲ್ಲಿ ಒಬ್ಬರು ವಾರಿಯರ್ ಎನ್ನುವವರು ಇದ್ದಾರೆ. ಇವರು ಇಲ್ಲಿ ನಾಲ್ಕು ಸಾವಿರ ರೂಪಾಯಿಗಳಷ್ಟು ಸಂಬಳವನ್ನು ತಿಂಗಳಿಗೆ ಪಡೆಯುತ್ತಿದ್ದಾರೆ. ಇವರು ಇನ್ನೇನು ರಿಟೈರು ಆಗುವುದರಲ್ಲಿದ್ದರು. ಇಂತಹವರನ್ನು ಇಲ್ಲಿ ಪ್ರೊಫೆಸರನ್ನಾಗಿ ಟೆಕ್ನಿಕಲ್ ಸೆಲಕ್ಷನ್ ಕಮಿಟಿಯವರು ನೇಮಕ ಮಾಡಿ ಇಲ್ಲಿಗೆ ತಂದಿದ್ದಾರೆ. ಇವರಿಗೆ ಯಾವ ವಿಧವಾದ ಅನುಭವ ಕೂಡ ಇಲ್ಲ ಇಂತಹವರು ಪ್ರೊಫೆಸರಾಗಿದ್ದರೆ ಇವರಿಂದ ಯಾವ ರೀತಿ ಕೆಲಸಗಳಾಗುತ್ತವೆ ? ಇದರಿಂದ ಇನ್ಸ್‌ಟಿಟ್ಯೂಟಗೇನು ಸಹಾಯ ವಾಗುತ್ತದೆ ?

ಶ್ರೀ ಎ. ಆರ್. ಬದರೀನಾರಾಯಣ.— ಇಲ್ಲಿರುವ ಟೆಕ್ನಿಕಲ್ ಕಮಿಟಿ ಒಂದು ಎಕ್ಸಪರ್ಟ್ಸ್‌ಗಳಿಂದ ಕೂಡಿರುವ ಕಮಿಟಿ. ಅವರು ಇದನ್ನೆಲ್ಲಾ ನೋಡಿ ಮಾಡುತ್ತಾರೆ. ಇವರಿಗೆ ಕೊಡುತ್ತಿರುವ ೩೦ ಲಕ್ಷ ರೂಪಾಯಿ ಹಾಗೂ ಜಾಗ ವಾಪಸು ಪಡೆಯ ಬೇಕೆಂದು ಹೇಳಿದರು. ಇದೊಂದು ಉತ್ತಮವಾದ ತರಬೇತಿ ಕೊಡುವ ಶಿಕ್ಷಣ ಸಂಸ್ಥೆ. ಇಂತಹ ಸಂಸ್ಥೆಯನ್ನು ನಮ್ಮ ದಕ್ಷಿಣದ ಭಾಗದಲ್ಲಿ ಪಡೆಯಲು ಆಗಿದ್ದ ರಾಜ್ಯಪಾಲರು ಬಹಳವಾಗಿ ಕಷ್ಟಪಟ್ಟು ಇದನ್ನು ಇಲ್ಲಿಗೆ ತಂದರು. ಇಲ್ಲದಿದ್ದರೆ ಇದು ಇಲ್ಲಿಗೆ ಬರುತ್ತಲೇ ಇರಲಿಲ್ಲ. ಇದೊಂದು ರಾಷ್ಟ್ರೀಯವಾದ ತರಬೇತಿ ಕೊಡುವ ಶಿಕ್ಷಣ ಸಂಸ್ಥೆಯಾಗಿ ಚೆನ್ನಾಗಿ ಕೆಲಸ ಮಾಡುತ್ತಿದೆ. ಇಲ್ಲಿರುವವರೆಲ್ಲ ಪರಿಣತರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಇದರಲ್ಲೇನೇ ಅನ್ಯಾಯಗಳಾಗಿವೆ ಅದಕ್ಕಾಗಿ ಇವರಿಗೆ ಕೊಟ್ಟಿರುವ ಜಾಗವನ್ನು ಹಾಗೂ ನಾವು ಕೊಡುತ್ತಿರುವ ೩೦ ಲಕ್ಷದಷ್ಟು ಹಣವನ್ನು ವಾಪಸು ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿ ದರು. ಅವರೇನೋ ಇದನ್ನು ವಾಪಸು ಕೊಡಲು ಸಿದ್ಧರಾಗಿದ್ದಾರೆ, ಬೇರೆ ಕಡೆ ಅವರು ಹೋಗಲೂ ಅವರಿಗೆ ಅವಕಾಶವಿದೆ. ಹಾಗೆ ನಾವು ಅಷ್ಟು ದೂರ ಹೋಗು

ವುದು ಬೇಡ, ಈ ಸಂಸ್ಥೆ ಬಹಳ ಜೆನ್ನಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ವಿಧ್ಯಾಭ್ಯಾಸ ಕ್ಷೇತ್ರದಲ್ಲಿ ಒಳ್ಳೆಯ ವಿದ್ಯಾಭ್ಯಾಸ ಕೊಡುವದರಲ್ಲಿ ಇದು ಬಹಳ ಒಳ್ಳೆಯ ಹೆಸರು ಪಡೆದಿದೆ, ಇದರಿಂದ ನಮ್ಮ ರಾಜ್ಯಕ್ಕೂ ಬಹಳ ಅನುಕೂಲ ವಾಗಿದೆ ಮತ್ತು ಇಂತಹ ಹೆಚ್ಚಿನ ತರಬೇತಿ ಕೊಡುವ ಬೇರೆ ಯಾವ ಸಂಸ್ಥೆಯೂ ಇಲ್ಲಿಲ್ಲ. ಇದೊಂದು ಅಂತರ ರಾಷ್ಟ್ರೀಯ ಮನ್ನಣೆ ಪಡೆದಂತಹ ಸಂಸ್ಥೆ ಎನ್ನುವು ದನ್ನು ಮಾನ್ಯ ಸದಸ್ಯರು ಮನಗಾಣಬೇಕು. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಇಲ್ಲಿ ಇಂತಹ ಇನ್‌ಸ್ಟಿಟ್ಯೂಟು ಮಾಡಿರುವದು.

ಶ್ರೀ ಕೆ.ಎಚ್. ಹನುಮೇಗೌಡ.— ಇಲ್ಲಿರುವ ಸೆಲಕ್ಷನ್ ಕಮಿಟಿಯಲ್ಲಿ ನಮಗೆ ಬಂದಿರುವ ವರ್ತಮಾನಗಳ ಪ್ರಕಾರ ಬರೀ ಕೇರಳದವರನ್ನು ಹಾಗೂ ತಮಿಳುನಾಡಿ ನವರನ್ನೇ ಇಲ್ಲಿ ನೇಮಕ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ಜನರು ಒಬ್ಬರನ್ನೂ ನೇಮಕ ಮಾಡುತ್ತಿಲ್ಲ. ನಮ್ಮ ರಾಜ್ಯದ ಜನರನ್ನು ಇಲ್ಲಿ ಹೆಚ್ಚು ನೇಮಕ ಮಾಡಲು ಸರಕಾರ ಏನು ಕಾರ್ಯಕ್ರಮವನ್ನು ಇದುವರೆಗೆ ತೆಗೆದುಕೊಂಡಿದೆ ?

ಶ್ರೀ ಎ ಆರ್. ಬದರೀನಾರಾಯಣ.— ತಮಗೆ ಬಂದಿರುವ ವರ್ತಮಾನ ಗಳ ಪ್ರಕಾರ ನಿರ್ದಿಷ್ಟವಾಗಿ ಸರಕಾರಕ್ಕೆ ತಿಳಿಸಿದರೆ ಸರಕಾರ ಕೂಡಲೇ ಇದರಲ್ಲಿ ತಪ್ಪಾಗಿದೆ, ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕು ಎಂದು ಹೇಳತಕ್ಕ ಅಧಿಕಾರ ಸರಕಾರಕ್ಕೆ ಇದೆ. ಅಂತಹ ಅನ್ಯಾಯಗಳೇನಾದರೂ ಆಗಿದ್ದರೆ ದಯವಿಟ್ಟು ಸರಕಾರಕ್ಕೆ ತಿಳಿಸಿ.

ಶ್ರೀ ಹೆಚ್. ಎಸ್. ಸಿದ್ದಪ್ಪ — ಇದೊಂದು ರಾಷ್ಟ್ರೀಯವಾದ ತರಬೇತಿ ಕೊಡುವ ಸಂಸ್ಥೆಎಂದು ತಾವು ಹೇಳುತ್ತೀರಿ ನಾನೂ ಕೂಡ ನಿಮ್ಮೊಡನೆ ಒಪ್ಪುತ್ತೇನೆ. ಆದರೆ ಇದು ನಮ್ಮ ಹಾಗೂ ನಿಮ್ಮ ಮಕ್ಕಳ ಅಲ್ಲದೆ ನಮ್ಮ ರಾಜ್ಯದ ಎಲ್ಲ ಮಕ್ಕಳ ಪ್ರಶ್ನೆ, ನಾನು ಬರುವದಿಲ್ಲ ತಾವೇ ಬೇಕಾದರೆ ನಮ್ಮ ಅಧ್ಯಕ್ಷರೊಡನೆ ಒಂದು ದಿವಸ ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ಏನೇನು ಅನಾಹುತಿಗಳಾಗು ತ್ತಿವೆ ಎಂಬುದನ್ನು ನೀವೇ ನೋಡಬಹುದು. ಇದರಲ್ಲಿ ಇರುವದು ಎಂತಹ ನ್ಯಾಷನಲ್ ಪಾಲಿಸಿ, ನನಗಂತೂ ಅರ್ಥವಾಗುತ್ತಿಲ್ಲ ನಿಮಗೇಕೆ ಇದರಲ್ಲಿ ಇಷ್ಟೊಂದು ಅಭಿಮಾನ ? ದಯಮಾಡಿ ನಮ್ಮ ಮೈಸೂರು ಜನತೆಯ ಕಲ್ಯಾಣ ಕ್ಕಾಗಿ ಅಲ್ಲಿ ಹೋಗಿ ಒಂದು ಸಾರಿ ನೋಡಿ ಬನ್ನಿ. ಅಲ್ಯೂಮಿನಿಯಂ ಫ್ಯಾಕ್ಟರಿಯ ಲ್ಲಿದ್ದವರನ್ನು ಅಲ್ಲಿಗೆ ತಂದು ದೊಡ್ಡ ಹುದ್ದೆಯಲ್ಲಿ ಏಕೆ ನೇಮಕ ಮಾಡುತ್ತೀರಿ ? ಇದರಲ್ಲೇನು ಅನಾಹುತಗಳಾಗಿವೆ ಎನ್ನುವದನ್ನು ತಾವು ಒಂದು ಸಾರಿ ಅಲ್ಲಿಗೆ ಹೋಗಿ ನೋಡಿ ಬಂದರೆ ಗೊತ್ತಾಗುತ್ತದೆ. ಆ ರೀತಿ ನೀವೇನೂ ಮಾಡದೇ ಹೋದರೆ ನಾನು ಈಗ ಸತ್ಯಾಗ್ರಹ ಮಾಡಬೇಕಾಗುತ್ತದೆ.

2-30 P. M.

ಶ್ರೀ ಎ. ಆರ್. ಬದರೀನಾರಾಯಣ.— ಅನಾಹುತವಾಗಿದೆ ಎನ್ನತಕ್ಕ ವಿಚಾರವನ್ನು ಬಹಳ ದೊಡ್ಡ ಶಬ್ದಗಳಿಂದ ಹೇಳಿದ್ದಾರೆ. ಯಾವ ಅನಾಹುತವಾಗಿದೆ ಎನ್ನತಕ್ಕದ್ದು ಸ್ವಲ್ಪ ಕಾಂಕ್ರೀಟ ಆಗಿ ಹೇಳಿದರೆ ಅದನ್ನು ಏಮರ್ಶೆ ಮಾಡಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ —ಅಲ್ಯೂಮಿನಿಯಂ ಫ್ಯಾಕ್ಟರಿಯಲ್ಲಿ ಮ್ಯಾನೇಜರ ಆಗಿದ್ದವರನ್ನು, ಇಷ್ಟರಲ್ಲಿಯೇ ರಿಟೈರ್ ಆಗುವವರನ್ನು ಇಲ್ಲಿ ತಂದು ಹಾಕಿರುವುದರಿಂದ ಅನಾಹುತವಾಗಿದೆ. He is a Kerala man. He has been appointed here as managing Director.

ನಮ್ಮ ಜನಕ್ಕೆ ಬಹಳ ಅನ್ಯಾಯವಾಗುತ್ತಾ ಇದೆ. ಆದುದರಿಂದ ನಾಳೆ ಹೋಗಿ ಅದನ್ನು ಸರಿ ಮಾಡುತ್ತೇನೆ ಎಂದು ಆಶ್ವಾಸನೆ ಕೊಡದಿದ್ದರೆ ನಾನು ಕುಳಿತು ಕೊಳ್ಳುವದಿಲ್ಲ.

ಶ್ರೀ ಎ. ಆರ್. ಬದರೀನಾರಾಯಣ.— ಮಾನ್ಯ ಸಿದ್ದಪ್ಪನವರು ಅಷ್ಟು ಆಗ್ರಹಪೂರ್ವಕವಾಗಿ ಹೇಳಿರತಕ್ಕ ವಿಷಯವನ್ನು ಸರ್ಕಾರ ಗಮನಿಸಿ ಏನು ಮಾಡಬೇಕು ಎನ್ನುವದನ್ನು ಯೋಚಿಸುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಏನು ಯೋಚನೆ ಮಾಡುವದು? ನ್ಯಾಯ ಮಾಡುತ್ತೇನೆ, ನೀತಿ ಮಾಡುತ್ತೇನೆ ಎಂದು ಹೇಳಬೇಕು, ಇಲ್ಲಿ ಯೋಚಿಸುವ ಪ್ರಶ್ನೆಯೇ ಇಲ್ಲ.

ಶ್ರೀ ಎ. ಆರ್. ಬದರೀನಾರಾಯಣ.— ಇನ್ನು ಸ್ವಲ್ಪ ವಿಷಯವನ್ನು ಕೂಡ ತಿಳಿಸುತ್ತೇನೆ. ವಾರಿಯರ್‌ರವರು ಎಂಟಿಕ್ ಪಾಸ್ ಮಾಡಿದ್ದಾರೆ. ಅವರಿಗೆ ೪೦ ವರ್ಷ ಅವರು ಪರ್ಸನಲ್ ಮ್ಯಾನೇಜರ್ ಆಗಿದ್ದರು.

ಶ್ರೀ ಕೋಣಂದೂರು ಲಿಂಗಪ್ಪ.— ಅದೇ ಕ್ವಾಲಿಫಿಕೇಷನ್ ಇರುವ ಕನ್ನಡಿಗರೂ ಅರ್ಜಿ ಹಾಕಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಅವರಲ್ಲಿ ರಷ್ಟು ಓದಿರುವವರು ಇದ್ದಾರೆ. Why should he come from Kerala?

ಮೈಸೂರು ಜನಕ್ಕೆ ಅನ್ಯಾಯ ಮಾಡುತ್ತೀರಿ. ತಾವು ಅಧಿಕಾರವನ್ನು ಚಲಾಯಿಸಿ ನಾನು ಸರಿ ಮಾಡುತ್ತೇನೆ. ಕನ್ನಡಿಗರಿಗೆ ನ್ಯಾಯ ಮಾಡುತ್ತೇನೆಂದು ಹೇಳಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.— ಮಾನ್ಯ ಸ್ನೇಹಿತರು ಕನ್ನಡಿಗರಿಗೇ ಪ್ರಾತಿನಿಧ್ಯ ಸಿಕ್ಕುವ ಹಾಗೆ ನಾನು ಏರ್ಪಾಡು ಮಾಡುತ್ತೇನೆ ಎಂಬ ಭರವಸೆ ಕೊಡಬೇಕು ಎಂದು ಕೇಳುತ್ತಿದ್ದಾರೆ, ಇದೇ ರೀತಿ ಮುಖ್ಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ.

Sri. K. PUTTASWAMY.— I would like to know whether the Chair would give scope for coercion ?

MADAM SPEAKER.— I shall not allow any coercion. The hon. member Sri H. S. Siddappa cannot demand like that.

Sri H. S. SIDDAPPA.— I am not demanding but begging the Hon. Minister to give an assurance that justice would be done to the Mysoreans. If the hon. member Sri K. Puttaswamy who was the Minister and now an hon. member of this August House were to think that I am demanding, it is very unfortunate.

Sri D. B. KALMANKAR — The hon. member cannot insist upon the hon. Minister to give a reply in such and such a manner. It is the responsibility of the Hon. Minister to say in a manner which he thinks best. No hon. member is entitled to coerce the Hon. Minister to make a categorical statement. It amounts to coercion and I think this is not allowed under the Rules of Procedure.

Sri H. S. SIDDAPPA.— I am not demanding but I am begging.

Sri D. B. KALMANKAR.— Governmet cannot go on making reckless statements.

Sri A. R. BADARINARAYANA.— I wish to state that this Indian Institute of Management is a national institute under the management and control of the Central Government. At best what this Government can do is to convey the sentiments of this House that in so far as the Kannadigas are concerned, their interest should be protected.

Sri K. PUTTASWAMY.— It is not the sentiment of the entire House; but it is the sentiment of an individual member of this House. Any sentiment of an hon. member cannot be taken as the sentiments of this House.

ಶ್ರೀ ಎಚ್. ಟಿ. ಕೃಷ್ಣಪ್ಪ.— ಕಳೆದ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಶ್ರೀಮಾನ್ ದೇವೆಗೌಡರವರು ಮುಖ್ಯಮಂತ್ರಿಗಳಿಗೆ ಹಾಕಿದಾಗ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಭರವಸೆ ಕೊಟ್ಟಿದ್ದಾರೆ. ವಿವಾದಕ್ಕೆ ಆಸ್ಪದವಿಲ್ಲ ಕನ್ನಡಿಗರಿಗೆ

ಪ್ರಾತಿನಿಧ್ಯ ದೊರಕುವಂತೆ ಏರ್ಪಾಡು ಮಾಡುತ್ತೇನೆ ಎಂದು ಹೇಳಿದ ಮಾತಿನಿಂದ ಈಗ ದೂರ ಸರಿಯುತ್ತಿದ್ದಾರೆ ಎಂಬ ಕಾರಣದಿಂದ ಸಿದ್ದಪ್ಪನವರು ಆಕ್ಕೋಶದಿಂದ ಕಳಕಳಿಯಿಂದ ಕೇಳುತ್ತಿದ್ದಾರೆ. ಮುಖ್ಯ ಮಂತ್ರಿಗಳು ಹೇಳಿದ ಮೇಲೆ ಅದು ಈ ಸದನದ ಅಭಿಪ್ರಾಯ: ಅದು ಈ ಸದನದ ಅಭಿಪ್ರಾಯವಲ್ಲ ಎಂದರೆ ಏನು ಅರ್ಥ?

ಶ್ರೀ ಎಂ. ಎಸ್. ಕೃಷ್ಣನ್.— ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟನ್ನು ನಡೆಸುವುದು ಸೆಂಟ್ರಲ್ ಗೌವರ್ನಮೆಂಟನವರೇ? ಆದರೆ ನಮ್ಮ ಸ್ಟೇಟ್ ಗೌವರ್ನಮೆಂಟನವರಿಗೆ ಏನೂ ಜವಾಬ್ದಾರಿ ಇಲ್ಲವೆ? ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲವೇ?

Sri A. R. BADRINARAYANA.— The hon. member is repeating the question. I have already stated that the Management consists of large number of Mysoreans–both officials and non-officials, they are all in the Selection Committee. Even on the Selection Committee, there are Mysoreans. That committee follows certain norms while making selection.

This Institute, as I said earlier, is not meant not only for giving jobs to the people but it is also meant to get experts to train our students in an efficient manner. The idea is that our students should get proper coaching and proper training. I think we must be satisfied with getting the best training for our youngsters. I may assure this House that the sentiments of a section of this House will be conveyed to the Central Government.

ಶ್ರೀ ಎಚ್. ಎಸ್. ಸಿದ್ದಪ್ಪ.— ಇವತ್ತು ಯಾರಿಗೂ ಗೊತ್ತಿಲ್ಲದೇ ಇರುವ ವಿಷಯ ಹೇಳುತ್ತೇನೆ. ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಡ್ಮಿನಿಸ್ಟ್ರೇಷನ್ ಟ್ರೈನಿಂಗ್ ಅಂಗಿ ಸರ್ಟಿಫಿಕೇಟ್ ತೆಗೆದುಕೊಂಡಿರುವವರು ಎಚ್. ಎಂ. ಟಿ., ಎಚ್. ಎ. ಎಲ್., ಬಿ. ಇ. ಎಲ್. ಗೆ ಹೋದರೆ ಅಲ್ಲಿ ಕೇರಳದವರಿಗೆ ಕೆಲಸ ಕೊಡುತ್ತಾರೆ.

Sri A. R. BADRINARAYANA.— Certain allegations are made by the hon. members.

ಶ್ರೀ ಎಚ್. ಎಸ್. ಸಿದ್ದಪ್ಪ — ಕನ್ನಡಿಗರಿಗೆ ಯಾರೂ ಕೆಲಸ ಕೊಡುತ್ತಾ ಇಲ್ಲ. ನೀವು ಕನ್ನಡಿಗರಿಗೆ ಅನ್ಯಾಯವಾಗದ ಹಾಗೆ ನೋಡಿಕೊಳ್ಳುತ್ತೇನೆ ಎಂದು ಹೇಳಿದರೆ ಸಾಕು.

ಶ್ರೀ ಎಚ್. ಟಿ. ಕೃಷ್ಣಪ್ಪ — ಕೆಲವರಿಗೆ ಒಂದು ತರಹ ವ್ಯಾಧಿ. ಪಕ್ಕದ ಮನೆಯಲ್ಲಿ ಮಾಡಿರತಕ್ಕ ಸಾರು ರುಚಿ. ಮನೆ ಹೆಂಗಸು ಪಕ್ಕದ ಮನೆಗೆ ಹೋಗಿ

ಹುಳಿಮಾಡಿ ತಂದರೆ ಅದು ರುಚಿಯಾಗಿರುತ್ತದೆ. ಏನೇ ಆದರೂ ಮೈಸೂರಿನಲ್ಲಿ ಪ್ರತಿಭೆಗೆ ಕಡಿಮೆ ಇಲ್ಲ. ಮೈಸೂರಿನವರಿಗೆ ಅದ್ಯತೆ ಕೊಡಿ.

Sri A. R. BADARINARAYANA.— I, as the Education Minister, do not like to appropriate the powers which I do not have. We are only a recommendatory body. We can say, these are the feelings of the Mysoreans. We can convey the feelings to the Central Government or to the Board of Management. We can say that the members of this House strongly feel that Kannadigas should have a due share in the staff. That idea would be conveyed.

Sri H. S. SIDDAPPA.— I request the hon. Minister humbly to protect the interests of the Kannadigas.

Sri A. R. BADARINARAYANA.— I would protect the interests as much as Shri Siddappa would like to.

Sri H. T. KRISHNAPPA.— Is it your earnest desire to do so?

MADAM SPEAKER.— I cannot understand this sort of questioning.

re-Disturbance of Law and order in Bangalore.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಈ ರಾಜ್ಯದಲ್ಲಿ ಸಾರ್ವಜನಿಕ ಆಸ್ತಿಗೆ ಪ್ರಾಣಕ್ಕೆ ಬಹಳ ಅಪಾಯವಾಗಿದೆ. ಬೆಂಗಳೂರು ನಗರದಲ್ಲಿ ಜನತೆ ಸರ್ಕಾರದ ಬಗ್ಗೆ ಹುಚ್ಚೆದ್ದಿದ್ದಾರೆ.

ಅಧ್ಯಕ್ಷರು : ನೋಟೀಸ್ ಕಳುಹಿಸಿದ್ದೀರಾ?

ಶ್ರೀ ಬಿ. ಪುಟ್ಟಸ್ವಾಮಯ್ಯ.— ನಮ್ಮ ನಾಯಕರು ಕಾರ್ಯದರ್ಶಿಯವರಿಗೆ ಫೋನ್ ಮಾಡಿದರು. ನಮ್ಮ ಪ್ರಾಣ ಹೋಗುವಾಗ ಯಾವ ನೋಟೀಸ್ ಕಳುಹಿಸುವುದು? ಬರೆಯುವುದಕ್ಕೆ ಕೈ ಬರುವುದಿಲ್ಲ. ಅಸೆಂಬ್ಲಿ ಮೆಂಬರ್ ಹೋಗುತ್ತಿದ್ದಾನೆ ಹಿಡಿದುಕೊಳ್ಳಿರೋ ಎಂದು ಜನ ಬರುತ್ತಾರೆ. ಮುಖ್ಯಮಂತ್ರಿಗಳ ರಕ್ಷಣೆಗೆ ಹೋಗುತ್ತಿದ್ದ ಪೋಲೀಸ್ ಜೀಪು ಪುಡಿಪುಡಿಯಾಗಿದೆ. ಅನೇಕ ಆಸ್ತಿಪಾಸ್ತಿಗಳನ್ನು ಜನರು ಸುಟ್ಟುಹಾಕಿದ್ದಾರೆ. ಜನಗಳು ರೊಚ್ಚಿಗೆದ್ದಿದ್ದಾರೆ. ನಮ್ಮ ಪ್ರಾಣಗಳು ಉಳಿಯಬೇಕಾದರೆ, ಈ ದೇಶದ ಜನ ಸುಮ್ಮನೆ ಇರಬೇಕಾದರೆ ಯಾವುದಾದರೂ ಒಂದು ಕಟ್ಟುನಿಟ್ಟಾದಂಥ ಉತ್ತರ ಸರ್ಕಾರದಿಂದ ಜನತೆಗೆ ಬೇಕು. ವಿರೋಧ ಪಕ್ಷದವರಿಗೆ ಒಂದು ಯೂನಿಫಾರಂ ಸೆಟ್ ಕೊಡಿಸಿ ನಾವು ಹಾಕಿಕೊಂಡು ಬರುತ್ತೇವೆ. ಇಲ್ಲದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ. ಬಾವುಟ ಇಟ್ಟ ಗಾಡಿ ಕಥೆ ಏನಾಗಿದೆ ನೋಡಿ

ವೈ. ಎಸ್. ಪಾಟೀಲರು ಮತ್ತು ಬಾಪೂಗೌಡರು ಏಟು ತಿಂದಿದ್ದಾರೆ. ಹುನುಮೇ ಗೌಡರು ಕಾರ್ಯದರ್ಶಿಯವರಿಗೆ ಫೋನ್ ಮಾಡಿದ್ದಾರೆ. ಅಸೆಂಬ್ಲಿಗೆ ಬರಬೇಕಾದರೆ ಬಂಡೋಬಸ್ತ ಗಾಡಿ ಕಳಿಸಿ ಎಂದು. ಈ ಪರಿಸ್ಥಿತಿ ರಾಜ್ಯದಲ್ಲಿದೆ. ಏನು ಕಾರಣ ವೆಂದು ನಮ್ಮ ಹಾಸ್ಟೆಲ್‌ಗಳಿಗೆ ಕೆಲವರನ್ನು ಕೂಗಿ ಕೇಳಿದೆವು. ಅನ್ನ ಇಲ್ಲದೆ ಸಾಯುವ ಬದಲು, ಹೋರಾಡಿ ಸಾಯುತ್ತೇವೆ ಎಂದು ಹೇಳುತ್ತಾರೆ. ಕಟ್ಟುನಿಟ್ಟಾದ ಉತ್ತರ ಬೇಕು. ಮುಖ್ಯಮಂತ್ರಿಗಳ ಹಿಂದೆ ಬರುತ್ತಿದ್ದ ಪೋಲೀಸ್ ಜೀಪು ಪುಡಿಪುಡಿಯಾಗಿದೆ. ಬಸ್‌ಗಳನ್ನು ಸುಟ್ಟಿದ್ದಾರೆ. ಜನಗಳು ನಿರ್ಭಯವಾಗಿ ಓಡಾಡುವ ಪರಿಸ್ಥಿತಿ ಇಲ್ಲ. ಇದರ ಬಗ್ಗೆ ಸರ್ಕಾರದ ಕಟ್ಟುನಿಟ್ಟಾದ ಉತ್ತರ ಬೇಕು; ಪ್ರಾಣ ಹೋಗುವಂಥ ಸಮಯದಲ್ಲಿ ನೋಟೀಸ್ ಕೇಳಬೇಡಿ.

Re. Police excess on students in Hassan.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಸದನ ಪ್ರಾರಂಭವಾ ದಾಗಿನಿಂದಲೂ, ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಕೇಳಿಕೊಳ್ಳುತ್ತಲೇ ಇದ್ದೇನೆ. ಹಾಸನ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರ ದೌರ್ಜನ್ಯ ನಡೆಯಿತು. ಅದರ ಬಗ್ಗೆ ದೂರ ಕೊಟ್ಟಾಗ ನ್ಯಾಯಾಂಗ ವಿಚಾರಣೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು. ವಿಚಾರಣಾ ಆಯೋಗಕ್ಕೆ ಸತ್ತವನ ಬಗ್ಗೆ ವಿಚಾರಣೆ ಮಾಡಿ ಎಂದು ಆದೇಶ ಕೊಟ್ಟಿದ್ದಾರೆ ವಿದ್ಯಾರ್ಥಿಗಳ ಬಗ್ಗೆ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಸೇರಿಸಿಲ್ಲ.

(ಮೂರು–ನಾಲ್ಕು ಸದಸ್ಯರು ಎದ್ದು ಮಾತನಾಡುತ್ತಿದ್ದರು)

ಶ್ರೀ ಡಿ. ಕೆ. ನಾಯ್ಕರ್.— ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಒಂದು ವಿನಂತಿ ಮಾಡುತ್ತೇನೆ. ಒಬ್ಬರು ಮಾತನಾಡಲಿ ೩-೪ ಜನ ರೂಲ್ಸ್ ಬಿಟ್ಟು ಮಾತ ನಾಡುತ್ತಾರೆ. ಇದು ವರೆಗೆ ನಿಯಮ ಪಾಲಿಸಿಕೊಂಡು ಬಂದಂಥ ಮಾನ್ಯ ಸದಸ್ಯರು ೩-೪ ಜನ ಏಕೆ ಮಾತನಾಡಬೇಕು? ಒಬ್ಬೊಬ್ಬರೇ ನಿಂತು ದಯವಿಟ್ಟು ಮಾತನಾಡ ಬೇಕು.

ಶ್ರೀ ಜೆ. ಎಲ್. ಕಬಾಡಿ.— ನಿಮ್ಮ ಒಪ್ಪಿಗೆ ಹೇಳಿ, ನಿಮ್ಮ ಪಾರ್ಟಿಯವರನ್ನು ಕಂಟ್ರೋಲ್ ಮಾಡಿ.

ಶ್ರೀ ಡಿ. ಕೆ. ನಾಯ್ಕರ್.— ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಂಡೆ. ಅದನ್ನು ಕೂಡ ಅವರು ಅರ್ಥಮಾಡಿಕೊಳ್ಳಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಾಸನದ ಘಟನೆ ಬಗ್ಗೆ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ ದಿವಸ ಅದನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸಿದೆವು. ಆದರೆ ಅದರ ಟರ್ಮ್ಸ್ ಆಫ್ ರೆಫರೆನ್ಸ್ ನೋಡಿದರೆ ನಮಗೆ ಕಾಣುತ್ತಾ ಇರತಕ್ಕಂಥಾದ್ದು ರಾಜು ಎಂಬ ಹುಡುಗ ಸಂಶಯಾಸ್ಪದಕವಾದ ರೀತಿಯಲ್ಲಿ ಏನು ಮರಣಹೊಂದಿ

ದನ್ನೋ ಆ ಒಂದು ವಿಷಯಕ್ಕೆ ಮಾತ್ರ ಸೀಮಿತವಾಗಿಬೆಯೇ ಹೊರತು ಪೋಲೀಸಿನವರು ವಿದ್ಯಾರ್ಥಿಗಳ ಮೇಲೆ ಏನು ದೌರ್ಜನ್ಯ ನಡೆಸಿದರೋ ಅದು ಆವರ ಅಧಿಕಾರಕ್ಕೆ ಸೇರಿಲ್ಲ. ಆದುದರಿಂದ ಪೋಲೀಸಿನವರು ಆ ವಿದ್ಯಾರ್ಥಿಗಳ ಮೇಲೆ ನಡೆಸಿರತಕ್ಕಂಥ ದೌರ್ಜನ್ಯದ ಘಟನೆಯನ್ನೂ ಕೂಡ ಸೇರಿಸಬೇಕೆಂದು ನಾವು ಪ್ರಾರಂಭದಿಂದಲೂ ಕೇಳುತ್ತಿದ್ದೇವೆ. ಆದರೆ ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟ ಉತ್ತರ ಇದುವರೆಗೂ ಬಂದಿಲ್ಲಾ. ಅಲ್ಲದೆ ಹಾಸನದಲ್ಲಿ ನಡೆದಂಥ ಘಟನೆ ಬೇರೆ ಕಡೆಯೂ ಕೂಡ ವಿದ್ಯಾರ್ಥಿಗಳನ್ನು ರೊಚ್ಚಿಗೆಬ್ಬಿಸುವುದಕ್ಕೆ ಕಾರಣಭೂತವಾಗಿರುವುದರಿಂದ ಈ ಬಗ್ಗೆ ಸರ್ಕಾರದಿಂದ ಸ್ಪಷ್ಟ ಉತ್ತರ ಬಾರದ ಹೊರತು ಈ ರೋಗ ಶಮನವಾಗುವುದಿಲ್ಲ ಆದುದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ತಾವು ಈಗಲಾದರೂ ಹಾಸನದಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದಂಥ ಲಾಠಿಛಾರ್ಜು ಮತ್ತು ಪೋಲೀಸಿನವರು ವಿದ್ಯಾರ್ಥಿಗಳ ಮೇಲೆ ನಡೆಸಿದ ದೌರ್ಜನ್ಯ ಈ ಬಗ್ಗೆ ಈಗ ನೇಮಕ ಮಾಡಿದಂಥ ವಿಚಾರಣಾ ಆಯೋಗದ ವ್ಯಾಪ್ತಿಗೆ ಸೇರಿಸುವುದಕ್ಕೆ ಸಾಧ್ಯ ಇದೆಯೇ ಅಥವಾ ಇಲ್ಲವೇ ಹೇಳಿಬಿಡಿ. ಆ ಬಗ್ಗೆ ವಿಚಾರಣೆ ಮಾಡುತ್ತೇನೆ ಅಥವಾ ಇಲ್ಲ ಎಂದು ಹೇಳಿಬಿಡಿ. ನಮಗೆ ಇದುವರೆಗೂ ಕೂಡಾ ನಿಮ್ಮನ್ನು ಕೇಳಿ ಕೇಳಿ ಸಾಕಾಯಿತು. ಈಗ ಮೂರು ಉಪಾಯವು ಮುಗಿಯಿತು. ಇನ್ನು ನಾಲ್ಕನೇ ಉಪಾಯ ಮಾಡಬೇಕಾಗುತ್ತದೆ. ನೋಡಿಕೊಳ್ಳೋಣ.

ಶ್ರೀ ಕೆ.ಎಚ್. ಪಾಟೀಲ — ಮಾನ್ಯ ಸಭಾಧ್ಯಕ್ಷರೇ, ವಿರೋಧಿಪಕ್ಷದ ನಾಯಕರಾಗಿರುವವರು ಉಚ್ಚಮಟ್ಟದ ಪ್ರಜಾಪ್ರಭುತ್ವವನ್ನು ಅಪೇಕ್ಷೆ ಮಾಡುತ್ತಾ ಇರುವವರು ಈ ಸರ್ಕಾರವನ್ನು ಬದಲಿಸಿ ಮತ್ತೊಂದು ಸರ್ಕಾರವನ್ನು ಮಾಡುವದಕ್ಕೆ ಸಾಧನೆ ಮಾಡತಕ್ಕಂಥಾದದ್ದಕ್ಕೆ ಈ ರೀತಿ ಬೆದರಿಕೆ ಹಾಕುವುದು ಸಂಪ್ರದಾಯವೇ?

ಶ್ರೀ ಬಿ. ಪುಟ್ಟಸ್ವಾಮಯ್ಯ — ನೀವು ಏತಕ್ಕೆ ಹೆದರುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ.— ಅಧ್ಯಕ್ಷರೇ, ಈ ಸದನದ ಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಪತ್ರಿಕೆಯಲ್ಲಿ ಇದು ಬರಬಾರದು ಎನ್ನುವ ಉದ್ದೇಶದಿಂದ ಇದನ್ನು ಎಕ್ಸ್‌ಪಂಜ್ ಮಾಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಏತಕ್ಕೋಸ್ಕರ ಈ ಮಾತು ಬಂತು ಎಂದರೆ ಈ ಅಧಿವೇಶನ ಪ್ರಾರಂಭವಾದಾಗಿನಿಂದಲೂ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಾ ಇದ್ದೇನೆ ವಿದ್ಯಾರ್ಥಿಗಳ ಬಗ್ಗೆ ಪೋಲೀಸಿನವರು ನಡೆದುಕೊಂಡ ರೀತಿಯನ್ನೂ ಸಹ ವಿಚಾರಣಾ ಆಯೋಗಕ್ಕೆ ಸೇರಿಸಿ ಎಂದು. ಆದಕ್ಕೆ ಇದೂ ವರೆಗೂ ಸರ್ಕಾರದಿಂದ ಸ್ಪಷ್ಟ ಉತ್ತರ ಬರಲಿಲ್ಲಾ. ಈ ಬಗ್ಗೆ ಸರ್ಕಾರವನ್ನು ಕೇಳಿದಾಗಲೆಲ್ಲಾ ಮೌನದಿಂದ ಇರುತ್ತಾರೆ. ಆದುದರಿಂದ ವಿದ್ಯಾರ್ಥಿಗಳ ಮೇಲೆ ಪೋಲೀಸಿನವರು ನಡೆಸಿರತಕ್ಕಂಥ ದೌರ್ಜನ್ಯವನ್ನೂ ಸಹ ಸೇರಿಸುತ್ತೀರಾ ಅಥವಾ ಇಲ್ಲವೇ? ಈ ಬಗ್ಗೆ ಸರ್ಕಾರದಿಂದ ಸ್ಪಷ್ಟ ಉತ್ತರ ಬಾರದಿದ್ದುದರಿಂದ ಈರೀತಿ ರೊಚ್ಚಿಗೆದ್ದು ಹೇಳಬೇಕಾಯಿತು.

ಅಧ್ಯಕ್ಷರೇ.— ತಾವು ಇಷ್ಟು ಹೇಳಿದ್ದರೆ ಸಾಕಾಗಿತ್ತು. ಆದರೆ ಅದರ ಮುಂದಕ್ಕೂ ಏತಕ್ಕೆ ಆ ರೀತಿ ಮಾತನಾಡಿದಿರಿ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಈ ದಿನ ಬೆಳಗ್ಗೆ ಮಾನ್ಯ ಸದಸ್ಯರಾದ ಶ್ರೀ ಜಿ. ಪುಟ್ಟಸ್ವಾಮಯ್ಯನವರು ಹೇಳಿದ ಹಾಗೆ ನಾನೂ ಕೂಡ ಈ ಸದನಕ್ಕೆ ಬರುವಾಗ ಸೆಂಟ್ರಲ್ ಕಾಲೇಜ ಬಳಿ ಏನು ಘಟನೆ ನಡೆದಿದೆ ಅದನ್ನು ನೋಡಿದೆ. ಒಂದು ಬಸ್ಸನ್ನು ಸುಟ್ಟುಹಾಕಿದರು ಮತ್ತು ಪೋಲೀಸಿನವರು ಅಲ್ಲಿ ಟಯರ್ ಗ್ಯಾಸ ಮಾಡುವುದಕ್ಕೆ ಸಜ್ಜಾಗಿದ್ದರು. ತಮಗೆಲ್ಲಾ ಗೊತ್ತಿರುವ ಹಾಗೆ ಈಗ ಏನಾಗಿದೆ ಎಂದರೆ ದಿನಾಲೂ ಗಲಾಟೆ ಸ್ಕೂಲುಗಳಲ್ಲಿ ನಡೆಯುತ್ತಾ ಇದೆ. ವಿದ್ಯಾರ್ಥಿಗಳನ್ನು ಕೇಳಿದರೆ ಬೇರೆ ಯಾರೋ ಬಂದು ಈ ಕೆಲಸ ಮಾಡಿದ್ದಾರೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರ್ ಆದ ಶ್ರೀಮಾನ್ ನರಸಿಂಹಯ್ಯನವರೂ ಕೂಡ ಅವರ ಮಧ್ಯಬಂದು ಆ ವಿದ್ಯಾರ್ಥಿಗಳನ್ನು ನೀವು ಗಲಾಟೆ ಮಾಡಬೇಡಿ, ಮನೆಗೆ ಹೋಗಿ ಎಂದು ಹೇಳುತ್ತಿದ್ದರು. ಈಗ ಏನಾಗಿದೆ ಎಂದರೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ವಿದ್ಯಾರ್ಥಿಗಳಲ್ಲೇ ಎರಡು ಭಾಗವಾಗಿ ಆದ ಹಾಗೆ ಕಾಣುತ್ತಾ ಇದೆ. ಕೆಲವರು ಸ್ಕೂಲಿಗೆ ಹೋಗಿ ಎಂದು ಹೇಳುತ್ತಾರೆ. ಕೆಲವರು ಸ್ಕೂಲಿಗೆ ಹೋಗಬೇಡಿ ಎಂದು ಹೇಳುತ್ತಾರೆ. ಇನ್ನೊಂದು ಕಡೆ ನೋಡಿದರೆ ಕೆಲವು ಕಡೆ ಸಮಾಜ ಘಾತುಕ ಶಕ್ತಿಗಳು ಇದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಮತ್ತು ಇದರಲ್ಲಿ ಕೋಮುವಾರು ಪ್ರಚೋದನೆ ಇದೆ ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಇದು ಬೆಂಗಳೂರಿನಲ್ಲಿ ಮಾತ್ರವೇ ಅಲ್ಲ ಎಲ್ಲಾ ಕಡೆಯೂ ನಡೆಯುತ್ತಾ ಇದೆ. ಇದು ಬಹಳ ಗಂಭೀರವಾದ ಪರಿಸ್ಥಿತಿ. ಈ ಗಂಭೀರವಾದ ಪರಿಸ್ಥಿತಿಯನ್ನು ನಾವು ಈಗ ಯೋಜನೆ ಮಾಡುವ ಕಾಲ ಬಂದಿದೆ. ಈ ಗಂಭೀರವಾದ ಪರಿಸ್ಥಿತಿಯಿಂದ ಪೋಲೀಸಿನವರು ಚಿಕ್ಕ ಚಿಕ್ಕ ಮಕ್ಕಳನ್ನು ಹೊಡೆದರು ಎನ್ನುವ ಪ್ರಶ್ನೆ ಬಂದರೆ ಅದು ಸಾಲ್ವ್ ಆಗುವುದಿಲ್ಲ. ಈ ಪರಿಸ್ಥಿತಿ ಮತ್ತಷ್ಟು ಹೆಚ್ಚಿಕೊಂಡು ಹೋಗುವ ಸ್ಥಿತಿ ಬರುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ಯಾರು ಇದಕ್ಕೆ ಮೂಲ ಕಾರಣರಾಗಿದ್ದಾರೋ ಅದನ್ನು ಕಂಡು ಹಿಡಿದು ಈ ಪೋಲೀಸಿನವರ ದಬ್ಬಾಳಿಕೆಯನ್ನು ತಾವು ನಿಲ್ಲಿಸಬೇಕು. ಇದು ಮೊದಲನೇ ಕರ್ತವ್ಯ.

ಇನ್ನು ಎರಡನೆಯದಾಗಿ ಯಾರು ಈ ವಿಧ್ವಂಸಕ ಕೃತಿಗಳಿಗೆ ತೊಡಗಿದ್ದಾರೋ ಅವರ ಬಗ್ಗೆ ಹುಷಾರಾಗಿರಬೇಕು. ಮತ್ತು ನಾನೂ ಸಹ ವಿದ್ಯಾರ್ಥಿಗಳನ್ನು ಕೇಳಿಕೊಳ್ಳುತ್ತೇನೆ. ಈ ವಿಷಯದಲ್ಲಿ ಅವರು ಸಂಯಮದಿಂದ ಇರಬೇಕು ಎಂದು. ಮತ್ತು ಈ ಗಲಾಟೆ ಬಹಳ ದಿವಸದಿಂದಲೂ ನಡೆಯುತ್ತಾ ಇದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಕೋಮುವಾರು ಪ್ರಚೋದನೆಗಳು ಯಾರು ಮಾಡುತ್ತಿದ್ದಾರೋ ಅವರ ಬಗ್ಗೆ ಹುಷಾರಾಗಿರಬೇಕು. ಮತ್ತು ಅದು ನಡೆಯದೇ ಇರುವ ಹಾಗೆ ಒಂದು ತಹಬಂದಿಗೆ ತರುವಂತೆ ಮಾಡಬೇಕು ಎಂದು

ಇನ್ನು ಈ ಘಟನೆ ಬಗ್ಗೆ ಮುಂದುವರೆದು ಹೇಳುವುದಾದರೆ ನಾನು ಕೇಳಿದ್ದು ಏನೆಂದರೆ ಈ ವಿದ್ಯಾರ್ಥಿಗಳ ಬಗ್ಗೆ ಏನು ಕೇಸುಗಳು ಹಾಕಿದ್ದಾರೋ ಅದನ್ನು ವಿತಡ್ರಾ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಕೇಳಿದೆವು. ಅವರು ಈವೊತ್ತು ನಾಳೆ ಎಂದು ಹೇಳುತ್ತಿದ್ದಾರೆ. ಅವರಿಂದ ಯಾವ ಸ್ಪಷ್ಟವಾದ ಉತ್ತರವೂ ಬರಲಿಲ್ಲ ಎಂದು. ಮತ್ತು ರಾಜ್ಯಾದ್ಯಂತ ನಡೆದಂಥ ಘಟನೆಗಳ ಬಗ್ಗೆ ಆ ವಿದ್ಯಾರ್ಥಿಗಳ ಮೇಲೆ ಏನು ಕೇಸುಗಳನ್ನು ಹಾಕಿದ್ದಾರೋ ಅದನ್ನು ಏತಕ್ಕೆ ವಿತಡ್ರಾಮಾಡಲಿಲ್ಲ ಎಂದು ಕೇಳುತ್ತಾರೆ. ಮತ್ತು ಈ ಬಗ್ಗೆ ಮುಖ್ಯಮಂತ್ರಿಗಳನ್ನು ಕೇಳಿದೆವು. ಎಲ್ಲರನ್ನೂ ಕೇಳಿದೆವು. ಪೈಸ್‌ಥಾನ್ಸಲರ್‌ನ್ನು ಸಹ ಕೇಳಿದೆವು ಎಂದು ಹೇಳುತ್ತಾರೆ. ಮತ್ತು ಸರ್ಕಾರದವರಲ್ಲಿ ಇದನ್ನು ವಿತಡ್ರಾ ಮಾಡುವುದಕ್ಕೆ ಮನಸ್ಸು ಇದೆಯೋ ಇಲ್ಲವೊ? ನಾನೂ ಸಹ ಈ ಬಗ್ಗೆ ಕೇಳುತ್ತೇನೆ. ಇದನ್ನು ಸರ್ಕಾರ ಪರಿಶೀಲನೆ ಮಾಡಿ ಅವರ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಿ. ಈ ವಿಷಯದಲ್ಲಿ ಸರಿಯಾದ ಒಂದು ವಾತಾವರಣವನ್ನು ಕಲ್ಪಿಸುವ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದು. ಈ ಕೆಲಸ ಮಾಡಬೇಕು.

ಶ್ರೀ ಹೆಚ್. ಸಿದ್ದವೀರಪ್ಪ—ಮಾನ್ಯ ಸದಸ್ಯರು ಕೋಮುವಾರು ಪ್ರಚೋದನೆಗಳಿಂದ ಈರೀತಿ ಆಗುತ್ತದೆ ಎಂದು ಹೇಳಿದರು. ನಾನು ಹೇಳುತ್ತೇನೆ ಬೆಂಗಳೂರಿನಲ್ಲಿ ಕೋಮುವಾರು ಪ್ರಚೋದನೆಯಿಂದ ಇದು ನಡೆಯುತ್ತಾ ಇಲ್ಲ ಎಂದು, ಮತ್ತು ಕೋಮುವಾರು ಪ್ರಚೋದನೆ ಅಂದರೆ ಏನು ಎನ್ನುವುದನ್ನು ಸ್ವಲ್ಪ ವಿಶದೀಕರಿಸುತ್ತೀರಾ?

ಶ್ರೀ ಎಂ. ಎಸ್. ಕೃಷ್ಣನ್—ಇದನ್ನು ವಿಶದೀಕರಿಸಬೇಕಾಗಿಲ್ಲ. ಅದು ತಮಗೂ ಗೊತ್ತಿದೆ ಹಿಂದೂ ಮುಸ್ಲಿಮ್ ಗಲಾಟೆ ಏನು ಎನ್ನುವುದು. ಹಿಂದೂಗಳ ಮೇಲೆ ಮುಸ್ಲೀಮರು ಗಲಾಟೆ ಮಾಡುವುದು, ಮುಸ್ಲಿಂರ ಮೇಲೆ ಹಿಂದೂಗಳು ಗಲಾಟೆ ಮಾಡುವುದು.

ಶ್ರೀ ಹೆಚ್. ಸಿದ್ದವೀರಪ್ಪ— ಈ ವೊತ್ತಿನ ಪರಿಸ್ಥಿತಿ ಅದು ಯಾವುದೂ ಅಲ್ಲ. ಹಾಗೆ ಹೇಳಿದರೆ ಇದನ್ನು ನೀವೇ ಪ್ರಚೋದನೆ ಮಾಡಿದಹಾಗೆ ಆಗುತ್ತದೆ ಎಂದು ಕಾಣುತ್ತದೆ. ಈ ವೊತ್ತಿನ ದಿವಸ ಬೆಂಗಳೂರಿನಲ್ಲಿ ನಡೆಯುತ್ತಾ ಇರುವ ಗಲಾಟೆ ನನಗೆ ತಿಳಿದ ಪ್ರಕಾರ ಹಾಸನದಲ್ಲಿ ನಡೆದಂಥ ಘಟನೆಬಗ್ಗೆ ರೇಗಿಕೊಂಡು ಈ ಕೆಲಸ ಸ್ಟಾರ್ಟ್ ಮಾಡುತ್ತಿದ್ದಾರೋ ಹೊರತು ಇದರಲ್ಲಿ ಕೋಮುವಾರು ಪ್ರಚೋದನೆ ಇದೆ ಎನ್ನುವಂತಹದ್ದು ನನಗೆ ಕಾಣುತ್ತಾ ಇಲ್ಲ. ಹಾಗೇನಾದರೂ ಗೊತ್ತಿದ್ದರೆ ದಯವಿಟ್ಟು ಹೇಳಿ. In the interest of our State and in the interest of our Country and request you to help the government to find out what it is?

ಶ್ರೀ ಎಂ. ಎಸ್. ಕೃಷ್ಣನ್— ನಾನು ಬಂದಿರುವ ಪಾರ್ಟಿಯಿಂದ ಕೋಮುವಾರು ಪ್ರಚೋದನೆ ಮಾಡುವಹಾಗಿಲ್ಲ. ಅದು ನಮ್ಮ ಪಾರ್ಟಿ ಪ್ರಿನ್ಸಿಪಲ್ ಅಲ್ಲ.

ನಾವು ಕೋಮುವಾರು ಪ್ರಜ್ಞೋದನೆ ಮಾಡುತ್ತೀವೆ ಎಂದು ಹೇಳಿದರೆ ಅದನ್ನು ದೇಶದಲ್ಲಿ ಯಾರೂ ನಂಬುವುದಿಲ್ಲ ಮತ್ತು ನಮ್ಮ ರಾಜ್ಯದಲ್ಲೂ ಸಹ ಯಾರೂ ನಂಬುವುದಿಲ್ಲ.

3-00 P. M.

Sri H. SIDDAVEERAPPA.—You have imported new ideas into this unfortunate incident and given some communal colour which personally I feel there is none. If there are things which are known to the Hon. Member, Government will be grateful if he can let us know what it is.

Sri M. S. KRISHNAN.—Whether you want it or not, there are different organisations. There is the Youth Congress, Students federation, Yuvajana Samaja, Vidyarthi Parishat. You know that Vidyarthi Parishat is affiliated to Jan Sangh. ಅಷ್ಟೇ ಮಾತ್ರವಲ್ಲ, ಎಲ್ಲಾ ಕಡೆಯಲ್ಲೂ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಸ್ಪಷ್ಟವಾಗಿ ಹೇಳಿದರು ಎಂಬುದು ಸ್ಪಷ್ಟವಾಗಿ ಗೊತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದೇ ತಮ್ಮ ಅಭಿಪ್ರಾಯ ಆದರೆ ಅದನ್ನು ನಾವು ಒಪ್ಪಿಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಪಕ್ಷದವರು ಮತ್ತು ನಿಮ್ಮ ಪಕ್ಷದ ಸದಸ್ಯರಾಗಿರುವವರು ಮತ್ತು ವಿದ್ಯಾರ್ಥಿ ಮುಖಂಡರಾದವರು ಈ ವಿಷಯದಲ್ಲಿ ಬಹಳ ಆಸಕ್ತಿ ವಹಿಸುತ್ತಿದ್ದಾರೆ. ಏತಕ್ಕೆ ಎಂದು ಕೇಳಿದರೆ ಅರಸ್ ಸರ್ಕಾರ ಹೋಗಲಿ ಎಂದು. ಅವರು ಏನು ಮಾಡಿದ್ದಾರೆ ಎಂದು ಹೇಳುತ್ತಾರೆ. ಆದ್ದರಿಂದ ಸ್ವಲ್ಪ ಹ ಷಾರಾಗಿರಿ ಎಂದು ಹೇಳುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ನಾವು ಈ ವಿಷಯದಲ್ಲಿ ಅಸೆಂಬ್ಲಿಯಲ್ಲಿ ಮಾತನಾಡತಕ್ಕದ್ದು ಸಾಧುವಾದುದಲ್ಲ ಎಂದು ಇದ್ದೇವೆ. ವಿದ್ಯಾರ್ಥಿಗಳ ವಿಷಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಮಾನ್ಯ ಕೃಷ್ಣನ್‌ರವರು ಏನು ಹೇಳಿದ್ದಾರೆ ಅದನ್ನು ಸ್ವಲ್ಪ ಒಪ್ಪಿಕೊಳ್ಳಲೇ ಬೇಕಾಗಿದೆ. ವಿದ್ಯಾರ್ಥಿಗಳ ಜೊತೆಯಲ್ಲಿ ಬೇರೆಯವರು ಸೇರಿ ದೇಶದಲ್ಲಿ ಈಗ ಏನು ಅನಾಹುತಗಳು ನಡೆಯುತ್ತಿವೆ ಅವುಗಳ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ವಿದ್ಯಾರ್ಥಿಗಳು ಮುಷ್ಕರ ಹೂಡಿದಾಗ ಪೋಲೀಸರು ಏತಕ್ಕೆ ಹೋಗುತ್ತಾರೆ ಎಂದು ಕೇಳುತ್ತಾರೆ ಆದರೆ ವಿದ್ಯಾರ್ಥಿಗಳಿಂದ ಅನಾಹುತ ನಡೆಯುತ್ತಿದ್ದರೆ ಪೋಲೀಸರು ಹೋಗದಿದ್ದರೆ ಎಲ್ಲಾ ಸಲೀಸಾಗಿ ನಡೆಯುತ್ತಿದೆ ಎಂದು ಹೇಳುತ್ತೀರಾ? ವಿದ್ಯಾರ್ಥಿಗಳು ನಿಜವಾಗಿಯೂ ನಮ್ಮ ದೇಶದಲ್ಲಿ ಮುಂದೆ ಒಳ್ಳೆ ಭವಿಷ್ಯ ಮತ್ತು ಆಸೆ ಇಟ್ಟುಕೊಂಡಿದ್ದಾರೆ. ಏನು ಇವೊತ್ತಿನ ದಿವಸ ನಡೆದ ಘಟನೆ

ಯನ್ನು ನೋಡಿದರೆ, ಹಾಸನದಲ್ಲಿ ನಡೆದಂಥ ಘಟನೆ ಬಗ್ಗೆ ಯಾರು ಡೀಲ ಮಾಡ ಬೇಕೆಂದು ಹೇಳುತ್ತೀರಿ? ಅದನ್ನು ಚರ್ಚೆ ಮಾಡುವುದಕ್ಕೆ ಶಾಸನಸಭೆ ಇದೆ, ಕಾನೂನು ಇದೆ ಅದರ ಪ್ರಕಾರ ಮಾಡಿಕೊಂಡು ಹೋದರೆ ಸಾಕು. ಇದೇ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಕೆಲವರ ಪ್ರಜ್ಞೋದನೆ ಯಿಂದ ನಡೆಯುತ್ತಿದೆ ಆದ್ದರಿಂದ ಇದನ್ನು ಬಗೆಹರಿಸಲು ಎಲ್ಲರೂ ಪ್ರಯತ್ನ ಮಾಡ ಬೇಕು. ಪೋಲೀಸರು ಹತ್ತಿರ ಹೋದದ್ದೇ ತಪ್ಪು ಎಂದು ಹೇಳಿದರೆ ಕಾನೂನು ರಕ್ಷಣೆ ಮಾಡುವುದಕ್ಕೆ ಸಾಧ್ಯವೆ? ಹಾಸನದ ಮಾಜಿ ಸದಸ್ಯರು ಆದ ಶ್ರೀಮಾನ್ ತಿಮ್ಮಪ್ಪನವರು ಹೇಳಿದರು ಆ ರೀತಿ ಸುಮ್ಮನೆ ಕೂರುವ ಪರಿಸ್ಥಿತಿಯಲ್ಲಿ ಅಲ್ಲಿನ ಶಾನ್ತಿವೇಶ ಇಲ್ಲ ಎಂದು.

*** *** ***

ಅಧ್ಯಕ್ಷರು.—ಯಾರು ಮಾತನಾಡಬೇಕಾದರೂ ನನ್ನನ್ನು ಉದ್ದೇಶಿಸಿ ಮಾತ ನಾಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಈಗ.....

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರು ಒಂದೆರಡು ಬಾರಿ ಹೇಳಿದರು. ಏನೋ ಒಂದು ಬಾರಿ ಆವೇಶದಲ್ಲಿ ಹೇಳಿದ್ದಾರೆಂದರೆ ಪುನಃ ಅವರು.....

ಶ್ರೀ ಎಚ್. ಸಿದ್ದವೀರಪ್ಪ.—ಇವೊತ್ತು ನಾನಾದರೂ ಕೇಳಿಕೊಳ್ಳುವುದೇನೆಂದರೆ ದಯವಾಡಿ ಕೇಳಬೇಕು. ಈ ರೀತಿ ನಾವು ನಡೆದುಕೊಂಡರೆ ಏನು ಸಾಧನೆ ಮಾಡಿ ದಂತಾಗುತ್ತದೆ? ಏನೂ ಆಗುವುದಿಲ್ಲ. ನೀವು ಹೇಳಬೇಕಾದ್ದು ಹೇಳಿ, ಅದರೆ ಹೇಳುವ ರೀತಿಯಲ್ಲಿ ಹೇಳಿ, ಅದನ್ನು ಮಾಡುತ್ತೇವೆ. ಇಲ್ಲಿ ಈ ರೀತಿ ನಡೆದರೆ ಅದು ರೆಕಾರ್ಡಿನಲ್ಲಿ ಇರುತ್ತದೆ ಅದನ್ನು ಮುಂದೆ ಬರುವವರು ಎಲ್ಲಾ ತೆಗೆದುಕೊಂಡು ನೋಡಿ ಯಾರು ಈ ರೀತಿ ಮಾತನಾಡಿದ್ದಾರೆ ಎಂದು ನೋಡುತ್ತಾರೆ. ನೀವು ಏನಾದರೂ ಕೇಳುವುದು ಇದ್ದರೆ ಕೇಳಿ. ಆದರೆ ಎಲ್ಲರೂ ಒಟ್ಟಿಗೆ ನಿಂತು ಕೇಳಿದರೆ ನಮಗೆ ಒಂದೂ ಗೊತ್ತಾಗುವುದಿಲ್ಲ. ಸ್ಪೀಕರ್‌ರವರು ಮಧ್ಯೆ ಕೂತಿರುತ್ತಾರೆ ಪ್ರತಿಯೊಬ್ಬರೂ ಸ್ಪೀಕರ್‌ರವರಿಗೆ ಅಡ್ರೆಸ್ ಮಾಡಬೇಕು. ಪ್ರತಿದಿನ ಈ ರೀತಿ ಮಧ್ಯೆ ಪ್ರವೇಶಿಸಿ ಮಾತನಾಡುತ್ತಾ ಹೋದಲ್ಲಿ ಕಾರ್ಯಕ್ರಮ ಏನೂ ನಡೆಯುವುದಿಲ್ಲ; ಯಾವುದೂ ನಡೆಯುವುದಿಲ್ಲ. ದಯವಾಡಿ ತಮಗೆ ಕೇಳಿಕೊಳ್ಳುತ್ತೇನೆ, ಆ ರೀತಿ ಮಾತನಾಡತಕ್ಕದ್ದು ಸರಿಯಾದುದು ಅಲ್ಲ, ಅದರಿಂದ ಏನೂ ಸಾಧಿಸಿದಂತಾಗುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ— ಮಾನ್ಯ ಅಧ್ಯಕ್ಷರೆ, ವಿದ್ಯಾರ್ಥಿಗಳ ಚಳುವಳಿ ಯಾವ ರೀತಿ ನಡೆಯುತ್ತಾ ಇದೆ ಎಂದು ನಾನು

***Matter expunged as ordered by the Chair.

ಆಗಲೇ ಹೇಳುತ್ತಾ ಇದ್ದೆ. ಶೃಂಗೇರಿಯಲ್ಲಿಯೂ ಕೂಡ ಒಂದು ಸಾರಿ ಸಾಮೂಹಿಕವಾಗಿ ಪ್ರತಿಭಟನೆಯನ್ನು ತೋರಿಸಬೇಕು ಎಂದು ಹೇಳಿದಾಗ ಅವರು ಸುಮ್ಮನೆ ಮೆರವಣಿಗೆಯ ರೂಪದಲ್ಲಿ ಬಂದು ವಾಪಸ್ ಹೋದರು. ಯಾರೂ ಗಲಾಟೆ ಮಾಡಲಿಲ್ಲ. ಬೇಲೂರಿನಲ್ಲಿ ಏನು ನಡೆಯಿತು ಎನ್ನುವುದು ಮಾನ್ಯ ಸದಸ್ಯರಾದ ಪುಟ್ಟರಂಗನಾಥ ಅವರ ಮನೆಯಲ್ಲಿ ಏನು ಆಯಿತು ಎನ್ನುವುದು ತಮಗೆ ಗೊತ್ತಿದೆ. ವಿದ್ಯಾರ್ಥಿಗಳು ದೇಶದ ಮುಂದಿನ ಜನಾಂಗ. ಸದಸ್ಯರಾದ ನಾವು ವಿದ್ಯಾರ್ಥಿಗಳಿಗೆ, ನಿಮ್ಮ ಹತ್ತಿರ ಏನು ಡಿಟೇಲ್ಸ್ ಇದೆ, ಅದನ್ನು ಕೊಟ್ಟು ಹೋಗಿ ನಾವು ನೋಡಿಕೊಳ್ಳುತ್ತೇವೆ ಎನ್ನತಕ್ಕದ್ದನ್ನು ಹೇಳಬೇಕಾಗಿದೆ. ವಿದ್ಯಾರ್ಥಿಗಳು ಲೂಟಿ ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ, ಇದರಲ್ಲಿ ಪೋಲೀಸರು ಪ್ರವೇಶಮಾಡಿ ಇದನ್ನು ತಹಬಂದಿಗೆ ತರತಕ್ಕಂಥ ಸಂದರ್ಭದಲ್ಲಿ ಏನಾದರೂ ನಡೆದರೆ, ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ ಮಾಡಿದರು, ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದರು ಎಂದು ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡತಕ್ಕ ಕೆಲಸ ಸರಿಯೇ? ವಿದ್ಯಾರ್ಥಿಗಳ ಮೇಲೆ ಪೋಲೀಸರ ಅತ್ಯಾಚಾರ, ಗಧಾಯುದ್ಧ ನಡೆಯುತ್ತಾ ಇದೆ ಎಂದು ಏನು ಹೇಳುತ್ತಿದ್ದಾರೆ, ಈ ರೀತಿ ಅವರನ್ನು ಪ್ರಚೋದನೆ ಮಾಡತಕ್ಕದ್ದು ದೇಶದಲ್ಲಿ ಬಂದಿದೆ. ನಾನಾದರೂ ಕೂಡಾ ತಮ್ಮ ಮೂಲಕ ಸದಸ್ಯರಿಗೆ ಅರಿಕೆಮಾಡಿಕೊಳ್ಳುತ್ತೇನೆ, ತಮ್ಮ ಊರು, ಊರಿನ ಕ್ಷೇತ್ರ, ಕ್ಷೇತ್ರದಲ್ಲಿರತಕ್ಕ ವಿದ್ಯಾರ್ಥಿಗಳಿಗೆ ನಾವು ಸರಿಯಾದ ತಿಳುವಳಿಕೆ ಕೊಡಬೇಕು. ನಿಮ್ಮದು ಏನು ಇದೆ ಅದನ್ನು ನಮ್ಮ ಹತ್ತಿರ ಕೊಡಿ, ನಾವು ಸರಿಪಡಿಸದೆ ಇದ್ದ ಪಕ್ಷದಲ್ಲಿ ನೀವು ಹೊರಗೆ ಬನ್ನಿ ಎಂದು ನಮ್ಮ ಭಾವಿ ಜನಾಂಗಕ್ಕೆ ಹೇಳಬೇಕು. ಇಂಥ ಸಂದರ್ಭಗಳು ಬಂದಾಗ ಆ ರೀತಿ ಮಾಡಬಾರದು ಎಂದು ಎಲ್ಲರೂ ಕೂಡ ಅವರಿಗೆ ಹೇಳಬೇಕು. ಹಾಸನದ ಒಂದು ವಿಷಯದಲ್ಲಿ ಮಾತನಾಡುವುದಾದರೆ, ಒಂದು ವಿಷಯವನ್ನು ನಾವು ತಿಳಿದುಕೊಳ್ಳಬೇಕು. ಕಳುವು ಮಾಡಿದ ಎನ್ನತಕ್ಕ ವಿಷಯ.....

ಅಧ್ಯಕ್ಷರು — ಅದು ಎನ್‌ಕ್ವಯರಿಯಲ್ಲಿ ಬರುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.— ನಮ್ಮ ವಿದ್ಯಾರ್ಥಿಗಳು ಯಾವ ರೀತಿ ಕೆಲಸ ಮಾಡಿದ್ದಾ ಎಂದು ತಿಳಿದು ವ್ಯಥೆ ಪಟ್ಟಿ. ಈ ಒಂದು ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ವಿದ್ಯಾರ್ಥಿಪರಿಷತ್ತು ಎಂದು ಏನು ಹೇಳಿದ್ದಾರೆ, ಅದರ ಬಗ್ಗೆ ಸರ್ಕಾರದವರು ವಿಮರ್ಶೆ ಮಾಡಲಿಲ್ಲವೋ ಏನೋ ಎಂದು ನನಗನ್ನಿಸುತ್ತದೆ. ನನಗೆ ತಿಳಿದ ಹಾಗೆ ಈಗ ಶೃಂಗೇರಿ ಬಂದ ಅನ್ನು ಆಚರಿಸಬೇಕು ಎಂದು ಹೊರಟಿದ್ದಾರೆ. ಈ ಸಭೆಯಲ್ಲಿ ವಿದ್ಯಾರ್ಥಿಗಳನ್ನು ದುರುಪಯೋಗಪಡಿಸಿಕೊಳ್ಳತಕ್ಕ ಜನ ಏನು ಇದ್ದಾರೆ-....

(ನಾಲ್ಕೈದು ಜನ ಸದಸ್ಯರು ಎದ್ದು 'ಯಾರು ಯಾರು' ಎಂದು ಕೇಳಿದರು)

ಶ್ರೀ ಕೆ. ಎಚ್. ಹನುಮೇಗೌಡ.— ಇದು ಅತಿಯಾಯಿತು.

ಶ್ರೀ ಕೆ. ಎನ್. ವೀರಪ್ಪಗೌಡ.— ಕುಂಬಳಕಾಯಿ ಕಳ್ಳ ಎಂದರೆ ಹೆಗಲ ಮೇಲೆ ಕೈ ಏಕೆ ಇಟ್ಟುಕೊಳ್ಳಬೇಕು? ಕೆಲವರು ಸೇರಿಕೊಂಡು ಈ ರೀತಿ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಹೇಳಿದರು, ಆಗ ಸುಮ್ಮನೆ ಕೂತಿದ್ದರು. ನಾನು ಮೇಲಿಂದ ಮೇಲೆ ತಮ್ಮಲ್ಲಿ ಪಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಈ ವಿಷಯ ಈ ಮನೆಯಲ್ಲಿ ಚರ್ಚೆಯಾಗಬೇಕಾದರೆ, ವಿದ್ಯಾರ್ಥಿಗಳೇ ಆಗಲೀ, ಯಾರೇ ಆಗಲೀ ರಾಷ್ಟ್ರದ ಆಸ್ತಿಯನ್ನು ಹಾನಿಮಾಡತಕ್ಕದ್ದನ್ನು ನಿಲ್ಲಿಸಬೇಕು, ಹೀಗೆ ಹಾನಿಮಾಡುವ ಸ್ಥಿತಿಗೆ ಅವರು ಹೋಗಬಾರದು. ವಿರೋಧ ಪಕ್ಷದ ನಾಯಕರು ಮೇಲಿಂದ ಮೇಲೆ ವಿದ್ಯಾರ್ಥಿಗಳ ಸಂಬಂಧದಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಎನ್‌ಕ್ವಯರಿಯನ್ನು ಒಪ್ಪಿಕೊಳ್ಳಿ ಎಂದು ಹೇಳತಕ್ಕ ಮಾತು ಏನು ಇದೆ ಅದರಲ್ಲಿ ಅರ್ಥವಿಲ್ಲ, ಅದು ನಿಜವಾಗಿಯೂ ಇನ್ನೂ ಪ್ರಚೋದನೆಯನ್ನು ಮಾಡಿಕೊಂಡು ಹೋದಂತೆ ಆಗುತ್ತದೆ. ವಿದ್ಯಾರ್ಥಿಗಳಿಗೆ ಅವರು ಸಮಾಧಾನ ಹೇಳುವ ರೀತಿಯಲ್ಲಿ ಮಾತನಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ:— ನಮ್ಮ ರಾಜ್ಯದಲ್ಲಿರುವ ಅಶಾಂತಿಯ ಬಗ್ಗೆ ಕೆಲವು ಮೂಲ ಕಾರಣಗಳನ್ನು ಹೇಳಬೇಕಾಗಿದೆ. ಆದ್ದರಿಂದ ನನಗೆ ಒಂದೆರಡು ನಿಮಿಷ ಅವಕಾಶ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರಿ ಕೆ. ಎಚ್. ಹನುಮೇಗೌಡ.— ಸರಕಾರ ಮಾಡಿರತಕ್ಕ ಅವಿವೇಕತನದಿಂದ ಹುಡುಗರು ಆ ರೀತಿ ಮಾಡುತ್ತಿದ್ದಾರೆ.

MADAM SPEAKER.— The house will now stand adjourned for half an hour.

The House rose at Seventeen Minutes past three of the clock and re-assembled at thirty five Minutes past four of the clock.

[Madam Speaker in the Chair]

Lathi Charge on a few officials of Vidhana Soudha in The Canteen near Sudarshan Guest House.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿರತಕ್ಕಂಥಾ ವಿಷಯ ಅಲ್ಲದೆ ಮತ್ತೊಂದು ವಿಷಯ ನಡೆದಿದೆ. ಅದೇನೆಂದರೆ ಸುದರ್ಶನ ಅತಿಥಿ ಗೃಹದ ಪಕ್ಕದಲ್ಲಿದ್ದ ಕ್ಯಾಂಟೀನಿಗೆ ವಿಧಾನಸೌಧದ ನೌಕರರೊಬ್ಬರು ಕಾಫಿ ಕುಡಿಯುವುದಕ್ಕೆ ಹೋಗಿದ್ದರು....

ಅಧ್ಯಕ್ಷರು — ಈಗ ಮಾನ್ಯ ಸದಸ್ಯರು ಅದನ್ನು ಹೇಳುವುದಕ್ಕಾಗುವುದಿಲ್ಲ. ಈಗ ತಾನೆ ಮಾನ್ಯ ಸದಸ್ಯರು ಆ ಬಗ್ಗೆ ನನಗೆ ನೋಟೀಸ್ ಕಳುಹಿಸಿದ್ದಾರೆ. ನಾನು ಅದನ್ನು ಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ —ಈಗ ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ.

ಅಧ್ಯಕ್ಷರು —ಮಾನ್ಯ ಸದಸ್ಯರು ಕಳುಹಿಸಿರುವ ನೋಟೀಸನ್ನು ನಾನು ಓದುವುದು ಬೇಡವೇ ಮತ್ತು ನಾನು ಅದನ್ನು ಓದಿ ಸರ್ಕಾರಕ್ಕೆ ಕಳುಹಿಸುವುದು ಬೇಡವೇ ?

ಶ್ರೀ ಎಸ್. ಬಂಗಾರಪ್ಪ —ನನ್ನ ಅಭಿಪ್ರಾಯ ಏನೆಂದರೆ ಇದು ಅತಿ ಶೀಘ್ರವಾದ ಮತ್ತು ಪ್ರಾಮುಖ್ಯವಾದ ವಿಷಯ. ಇದು ನೌಕರ ವರ್ಗಕ್ಕೆ ಸಂಬಂಧ ಪಟ್ಟದ್ದು ಜನತೆಗೆ ಮತ್ತು ನೌಕರವರ್ಗದವರಿಗೆ ನಡೆದಿರತಕ್ಕ ಅನ್ಯಾಯವನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ವತಿಯಿಂದ ಒಂದು ಹೇಳಿಕೆಯನ್ನು ಕೊಡುವುದು ಒಳ್ಳೆಯದು. ಅವರನ್ನು ಸಮಾಧಾನ ಮಾಡುವ ಬಗ್ಗೆ ಒಂದು ಹೇಳಿಕೆಯನ್ನು ಸರ್ಕಾರದ ವತಿಯಿಂದ ಕೊಡಬೇಕು. ಪೋಲೀಸಿನವರು ಕೆಲವು ಜನಗಳನ್ನು ಹೊಡೆದಿದ್ದಾರೆ. ನಾಲ್ಕು ಜನಗಳನ್ನು ವ್ಯಾಸಿನಲ್ಲಿ ಹಾಕಿಕೊಂಡು ಹೋಗಿದ್ದಾರೆ. ಅವರಿಗೆ ನಾವು ಸಮಾಧಾನ ಮಾಡಿ ಹೇಳಿದ್ದೇವೆ.

ಶ್ರೀ ಡಿ. ದೇವರಾಜ ಅರಸ.—ಮಾನ್ಯ ಸದಸ್ಯರು ಹೇಳುವುದು ಸುಳ್ಳೇ ಅಥವಾ ನಿಜವೇ ? ಅದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶ ಇದೆ ಎಂಬುದನ್ನು ನಾನು ತಿಳಿಯದೇ ಮಾನ್ಯ ಸದಸ್ಯರು ಹೇಳುವುದನ್ನು ನಂಬುವುದಕ್ಕಾಗುತ್ತದೆಯೇ ?

ಶ್ರೀ ಜೆ. ಎಲ್. ಕಬಾಡಿ.—ಪೋಲೀಸಿನವರು ಫೈನಾನ್ಸ್ ಡಿಪಾರ್ಟಮೆಂಟಿನ ನೌಕರರಾದ ಶ್ರೀ ಎಲ್. ರಾಮಯ್ಯ ಎನ್ನುವವರನ್ನು ಹೊಡಿದಿದ್ದಾರೆ.

Sri D. DEVARAJ URS.—Shall I give you another information ? There are some poeple who have given petrol for other purposes ಎಂದು ವರ್ತಮಾನ ಬಂದಿದೆ. ಏನು ಮಾಡುವುದಕ್ಕಾಗುತ್ತದೆ ? ಕೆಲವರು ಸ್ಕೂಟರಿಂದ ಪೆಟ್ರೋಲ್ ತೆಗೆದು ಕೆಲವು ಮಿಸ್ ಕ್ರೈಯೆಂಟ್ ಗಳ ಕೈಯಲ್ಲಿ ಕೊಟ್ಟಿದ್ದಾರೆ ಎಂದು ನೋಡಿದ್ದನ್ನು ಬಂದು ನನಗೆ ಹೇಳಿದ್ದಾರೆ. ಹೀಗೆ ವಿಚಾರಗಳು ಇರುವುದರಿಂದ ನಾವು ನೀವು ಇಲ್ಲಿಯೇ ಕುಳಿತುಕೊಂಡು ಒಂದು ತೀರ್ಮಾನಕ್ಕೆ ಬರುವುದು ಬೇಡ.

ಶ್ರೀ ಜೆ. ಎಲ್. ಕಬಾಡಿ —ಇದನ್ನು ಬೇಗನೇ ನೋಡಬೇಕು.

ಶ್ರೀ ಡಿ. ದೇವರಾಜ ಅರಸ.—ಈಗ ತಾನೇ ವರ್ತಮಾನ ಬಂದಿದೆ. ಅದನ್ನು ನೋಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳ ಕಾರಿಗೆ ಕಲ್ಲು ಬಿತ್ತು ಎಂದು ಗೊತ್ತಾಗಿದೆ.

ಶ್ರೀ ಡಿ. ದೇವರಾಜ ಅರಸ.—ನನ್ನ ಹಿಂದಿನ ಕಾರಿಗೆ ಕಲ್ಲು ಬಿತ್ತು. ಆದರೆ ನಮ್ಮ ಕಾರಿಗೆ ಕಲ್ಲು ಬಿದ್ದಿಲ್ಲ. ಒಂದು ವೇಳೆ ನನ್ನ ಕಾರಿಗೆ ಕಲ್ಲು ಬಿದ್ದರೆ ನಾನು ತಡೆದುಕೊಳ್ಳಬೇಕಾಗುತ್ತದೆ.

ಕೆಲವು ಮಾನ್ಯ ಸದಸ್ಯರು.—ಆ ರೀತಿ ಆಗುವುದಕ್ಕೆ ವಿರೋಧಪಕ್ಷದವರೇ ಕಾರಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ಪ್ರಚೋದನೆ ಇದೆಯೆಂದು ನಿಮ್ಮ ಸ್ನೇಹಿತರು ಹೇಳುತ್ತಿದ್ದಾರೆ. ಆ ರೀತಿ ಏನಾದರು ಇದ್ದರೆ ಏನು ಬೇಕಾದರು ನಮಗೆ ಶಿಕ್ಷೆ ಕೊಡಿ. ಆದರೆ ಇಂದು ಸಾವಿರಾರು ಜನರು ವಿಧಾನಸೌಧಕ್ಕೆ ನುಗ್ಗಿದ್ದಾರೆ. ಈ ರೀತಿ ಯಾವಾಗಲೂ ನುಗ್ಗಿರಲಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ.—ಆಗಲಿ ಅದನ್ನು ನೋಡೋಣ

ಶ್ರೀ ಕೋಣಂದೂರು ಲಿಂಗಪ್ಪ — ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ಯಾವುದೇ ಅರಾಜಕತೆಯನ್ನು ಮತ್ತು ವಿಧ್ವಂಸಕ ಕೃತ್ಯಗಳನ್ನು ಯಾರಾದರು ಮಾಡಿದರೆ ಅದನ್ನು ನಾವು ಒಪ್ಪುವುದಿಲ್ಲ. ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕು. ಇಂದು ಪ್ರಮಾಣಿಕರಾದಂತಹವರ ಮೇಲೆ ಮತ್ತು ಮುಗ್ಧರಾದವರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ನಮ್ಮ ನೌಕರರ ಮೇಲೆ ಮಾಡಿದ್ದಾರೆ. ಇದೇ ಕಾರಣದಿಂದ ವಿಧಾನಸೌಧದ ಎಲ್ಲ ನೌಕರರು ಹೊರಗೆ ಬಂದಿದ್ದಾರೆ.

ಶ್ರೀ ಡಿ. ದೇವರಾಜ ಅರಸ.—ಅರಾಜಕತೆ ಮತ್ತು ವಿಧ್ವಂಶಕ ಕೃತ್ಯಗಳನ್ನು ಯಾರಾದರು ಮಾಡಿದರೆ, ಅವರನ್ನು ಹತ್ತಿಕ್ಕಬೇಕು ಎಂಬುದು ಬಹುಶಃ ಈ ಮನೆಯಲ್ಲಿರತಕ್ಕ ಎಲ್ಲ ಸದಸ್ಯರೂ ಒಪ್ಪುತ್ತೀರಿ. ಈ ರೀತಿ ನಾನಾ ಕಡೆಗಳಲ್ಲಿ ಪ್ರಚೋದನೆಗಳು ನಡೆಯುತ್ತಿರುವುದರಿಂದ ನಾನು ಗಂಟೆ ಗಂಟೆಗೂ ವರದಿ ತರಿಸಿಕೊಂಡು ನೋಡುತ್ತಿದ್ದೇನೆ. ಜನರು ಇಷ್ಟೊಂದು ತೊಂದರೆಗಳನ್ನು ಕೊಡುತ್ತಿದ್ದರೂ ಸಹ ಪೋಲೀಸಿನವರು ಬಹಳ ಸಹನೆಯಿಂದ ವರ್ತಿಸುತ್ತಿದ್ದಾರೆ. ಜನರು ಮಾಡುತ್ತಿರುವ ಪ್ರಚೋದನೆಯಿಂದ ಪೋಲೀಸಿನವರು ಉದ್ರೇಕಗೊಳ್ಳದೆ, ಇನ್ನೂ ಹೆಚ್ಚಿನ ಅಚಾತುರ್ಯವಾಗದಂತೆ ನೋಡಿಕೊಳ್ಳಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆ ಪೋಲೀಸ್ ಎಕ್ಸಸನ್ ಆಗುತ್ತಿದೆ ಎಂಬ ಅನುಮಾನವನ್ನು ಏನು ತಾವು ವ್ಯಕ್ತಪಡಿಸುತ್ತಿದ್ದೀರಿ, ಆ ರೀತಿಯಾಗದಂತೆ ನೋಡಿಕೊಳ್ಳಲು ಅವರು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಒಂದೊಂದು ಸಂದರ್ಭದಲ್ಲಿ ತಾವು ಹೇಳಬಹುದು. ಇನ್ನೊಸೆಂಟ್ ಪೀಪಲ್ಸ್‌ಗೆ ತೊಂದರೆಯಾಗಿದೆ ಎಂದು. ಅಂಥಾದ್ದು ಏನಾದರೂ ಆಗಿದ್ದರೆ, ಅದಕ್ಕೆ ನಾನೂ ಸಹ ವಿಷಾದ ವ್ಯಕ್ತಪಡಿಸುತ್ತೇನೆ ಅನಿವಾರ್ಯವಾಗಿ ಒಂದೊಂದು ಸಂದರ್ಭದಲ್ಲಿ ಈ ರೀತಿ ಆಗುತ್ತದೆ. ಅಂದಾಕ್ಷಣ ಪೋಲೀಸರನ್ನೇ ತೆಗೆದುಹಾಕುವುದಕ್ಕಾಗುತ್ತದೆಯೇ ಎಂಬುದನ್ನು ತಾವೇ ಯೋಚನೆ ಮಾಡಿ. ಈ ಒಂದು ಅರಾಜಕತೆಯನ್ನು ನಿಲ್ಲಿಸಬೇಕು ಮತ್ತು ಹತೋಟಿಗೆ ತರಬೇಕು ಅಲ್ಲದೆ ತಪ್ಪು ಮಾಡಿದವರು ಯಾರೇ ಆಗಿರಲಿ, ಅವರನ್ನು ಶಿಕ್ಷೆಗೆ ಗುರಿ

ಮಾಡಬೇಕು ಎಂಬುದನ್ನು ನಾವೆಲ್ಲಾ ಒಪ್ಪಿಕೊಂಡ ಮೇಲೆ, ಅದನ್ನು ಪೋಲೀಸರು ಮಾಡುತ್ತಾರೆ. ಕೆಲವು ಸಲ ಪೋಲೀಸಿನವರಿಗೆ ಗಲಾಟೆ ಸಮಯದಲ್ಲಿ ಗುರುತು ಹಿಡಿಯುವುದು ಕಷ್ಟವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಗುರುತಿನ ಕಾರ್ಡನ್ನು ತೋರಿಸಿದರೂ ಸಹ ಸರ್ಕಾರೀ ನೌಕರರಿಗೆ ಹೊಡೆದಿದ್ದಾರೆ.

ಶ್ರೀ ಡಿ. ದೇವರಾಜ ಅರಸ.—ವಿಚಾರ ಏನು ನಡೆದಿದೆ ಎಂಬುದನ್ನು ಮೊದಲು ತಿಳಿದುಕೊಳ್ಳೋಣ. ತಾವು ಹೇಳಿದ್ದನ್ನೆಲ್ಲಾ ಕೇಳಿಕೊಂಡು ತೀರ್ಮಾನಕ್ಕೆ ಬರುವುದ ಕ್ಕಾಗುವುದಿಲ್ಲ. ತಾವು ಈ ರೀತಿ ಹೇಳಿದರೆ, ನನಗೆ ಇನ್ನೊಂದು ವರ್ತಮಾನ ಬಂದಿದೆ. ಏನೆಂದರೆ ಒಂದೆರಡು ಕಡೆಗಳಲ್ಲಿ ಕೆಲವರು ತಮ್ಮ ಸ್ಕೂಟರ್‌ಗಳಿಂದ ಪೆಟ್ರೋಲ್ ತೆಗೆದುಕೊಡುತ್ತಿದ್ದರು ಎಂದು. ಇದನ್ನು ನೋಡಿಕೊಂಡು ಬಂದವರು ನನಗೆ ಹೇಳಿದ್ದಾರೆ. ಆದ್ದರಿಂದ ಇಂತಹ ವಿಚಾರಗಳು ಬಂದಾಗ, ಯಾರೋ ಬಂದು ಹೇಳಿದ ಕೂಡಲೆ ಆತುರವಾಗಿ ಮಾತನಾಡುವದಾಗಲೀ ಅಥವಾ ತೀರ್ಮಾನಕ್ಕೆ ಬರುವುದಾಗಲೀ ಅಷ್ಟು ಸೂಕ್ತವಾಗಲಾರದು. ತಾವು ಹೇಳಿದ್ದನ್ನು ಕೇಳೋಣ; ಇನ್ನೊಬ್ಬರು ಹೇಳಿದ್ದನ್ನು ಕೇಳೋಣ. ಕ್ರಮವಾದ ರೀತಿಯಲ್ಲಿ ಇದನ್ನು ಬಗೆಹರಿಸಬೇಕಾಗುತ್ತದೆ; ಎಲ್ಲಿ ತಪ್ಪಿದೆ ಎಲ್ಲಿ ನೆಪ್ಪಿದೆ ಎಂಬುದನ್ನು ನೋಡಬೇಕಾಗುತ್ತದೆ. ವಿಧಾನಸೌಧಕ್ಕೆ ನುಗ್ಗುವುದಕ್ಕೆ ಅಷ್ಟು ಸುಲಭವಾಗಿ ಬಿಟ್ಟುಕೊಡುತ್ತಾರೆಂದು ಯಾರೂ ಭಯಪಡಬೇಕಾಗಿಲ್ಲ. ನಮ್ಮನ್ನು ಮತ್ತು ನಿಮ್ಮನ್ನು ರಕ್ಷಣೆ ಮಾಡುವುದಕ್ಕೆ ಪೋಲೀಸ್ ಸಿಬ್ಬಂದಿ ಇದೆ. ಲಾ ಆಂಡ್ ಆರ್ಡರನ್ನು ಮೇನ್‌ಟೇನ್ ಮಾಡುವ ಶಕ್ತಿ ಪೋಲೀಸರಿಗೆ ಇದೆ; ಅದನ್ನು ಅವರು ಮಾಡುತ್ತಾರೆ. ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪೋಲೀಸರಲ್ಲೆ ತಪ್ಪಿದೆ ಎಂದು ಪ್ರತಿಗಳಿಗೆಯಲ್ಲಿಯೂ ಅವರನ್ನು ಡಿ-ಮಾರಲೈಜ್ ಮಾಡುವುದು ಅಷ್ಟು ಸೂಕ್ತವಲ್ಲ ಎಂದು Let us not indulge in demoralising the police people. We must give them all encouragement and help to maintain law and order. Government cannot let out lawless people to have their day.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಈಗ ಕೆಲವರು ತಮ್ಮ ಸ್ಕೂಟರ್‌ಗಳಿಂದ ಪೆಟ್ರೋಲ್ ತೆಗೆದುಕೊಟ್ಟರು ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಅದು ಒಂದು ರೀತಿಯಲ್ಲಿ ನೌಕರ ವರ್ಗದವರ ಮೇಲೇಯೇ ಅನುಮಾನ ಬರುವಂತೆ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ.—ಯಾರು ಎಂಬುದನ್ನು ನಾನು ಹೇಳಲಿಲ್ಲ. ಯಾರು ಎಂಬುದನ್ನು ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಇನ್ನೊಸೆಂಟ್ ಜನರಿಗೆ ಪೋಲೀಸಿನವರು ಹೊಡೆದಿದ್ದಾರೆ.

Sri D. DEVARAJ URS.—Let us see.

ಶ್ರೀ ಎಚ್. ಟಿ. ಕೃಷ್ಣಪ್ಪ.—ಪೋಲೀಸಿನವರು ಬಹಳ ಸಂಯಮದಿಂದ ವರ್ತಿಸಿದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳು ಈಗ ಏನು ಹೇಳಿದ್ದಾರೆ, ಅದನ್ನು ನಾನು ಸಹ ಕೇಳಿದ್ದೇನೆ. ಆದರೆ ವಿಧಾನಸೌಧದ ಮುಂದೆ ನಡೆದ ಘಟನೆ ಏನಿಜೆ, ಅದರ ಪ್ರತಿಧ್ವನಿ ಇಡೀ ವಿಧಾನಸೌಧದಲ್ಲಿಯೇ ಕೇಳಿಬರುತ್ತಿದೆ. ಎಲ್ಲ ರೂಮ್‌ಗಳನ್ನು ಮುಚ್ಚುತ್ತಿದ್ದಾರೆ. ಆದ್ದರಿಂದ ತುರ್ತುಪರಿಸ್ಥಿತಿಯಾಗಿದೆ. ಈ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಸಂಬಂಧಪಟ್ಟವರನ್ನು ಕರೆಸಿ ಮಾತನಾಡಬೇಕು. ನಿಧಾನ ಮಾಡಬಾರದು; ಮತ್ತು ತಪ್ಪಿಸ್ಥರ ಮೇಲೆ ಕ್ರಮ ಕೈಕೊಳ್ಳಬೇಕು. ನಿಧಾನ ಮಾಡಿದರೆ ತೊಂದರೆಯಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಅದನ್ನು ಅವರಿಗೆ ಬಿಟ್ಟುಬಿಡಿ, ಅವರು ಅದನ್ನು ನೋಡಿಕೊಳ್ಳುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಮೊನ್ನೆದಿವಸ ಒಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ ?

ಅಧ್ಯಕ್ಷರು.—ನನಗೆ ಹುಷಾರು ಇರಲಿಲ್ಲ. ಅದಕ್ಕಾಗಿ ನೋಡುವುದಕ್ಕಾಗಲಿಲ್ಲ. ಈಗ ಅದನ್ನು ತರಿಸಿಕೊಡುತ್ತೇನೆ. ತಾವು ೭ ತಿಂಗಳಿಗೆ ಹುಟ್ಟಿದ ಹಾಗೆ ಮಾಡುವುದು ಏತಕ್ಕೆ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಇನ್ನೊಂದು ೭ ತಿಂಗಳ ಸುದ್ದಿ ಇದೆ. ಪೂರ್ ಆಫೀಸರ್ ಒಬ್ಬರು ಸತ್ತು ಹೋಗಿರುವ ಬಗ್ಗೆ ನಿಲುವಳಿ ಸೂಚನೆ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ಕಾಲಿಂಗ್ ಅಟೆನ್ಷನ್ ಆಗಿ ಪರಿವರ್ತನೆ ಮಾಡಿ ಕಳುಹಿಸಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದೂ ೭ ತಿಂಗಳ ಸುದ್ದಿಯೇ ?

ಅಧ್ಯಕ್ಷರು.—ಇಲ್ಲ, ೯ ತಿಂಗಳ ಸುದ್ದಿ.

ಶ್ರೀ ಕೋಣಂದೂರು ಲಿಂಗಪ್ಪ.—ಗುರುವಾರ ದಿವಸ ನಾನು ಸೊಂಡೂರಿನ ವಿಷಯ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು.

ಶ್ರೀ ಡಿ. ದೇವರಾಜ ಅರಸ.—ಆ ಬಗ್ಗೆ ನಾಳೆ ಅಥವಾ ನಾಡಿದ್ದು ಮಾಡುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಹಾಸನದ ಘಟನೆಯ ಬಗ್ಗೆ ವಿಚಾರಣೆ ನಡೆಸಲು ಏನು ಏರ್ಪಾಡು ಮಾಡಿದ್ದೀರಿ ? ಅದರ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ, ವಿದ್ಯಾರ್ಥಿಗಳ ಮೇಲೆ ಪೋಲೀಸಿನವರು ನಡೆಸಿದ ದೌರ್ಜನ್ಯದ ವಿಷಯವನ್ನು ಸಹ ತನಿಖೆ ಮಾಡಲು ಸೇರಿಸಬೇಕು. ಈಗ ಇದನ್ನು ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಸೇರಿಸಿಲ್ಲ.

Sri D. DEVARAJ URS.—That will be departmentally looked into.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ವಿಷಯವನ್ನು ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಸೇರಿಸಿಲ್ಲ. ಆ ವಿಷಯ ಪತ್ರಿಕೆಗಳಲ್ಲಿ ಸಹ ಬಂದಿದೆ. ಈ ಘಟನೆಯಲ್ಲಿ ಪೋಲೀಸ್ ಎಕ್ಸ್‌ಸನ್ ಇದೆಯೇ ಅಥವಾ ಇಲ್ಲವೇ ಎಂಬುದನ್ನು ತನಿಖೆ ಮಾಡಲು ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿಸೇರಿಸಬೇಕು. ಇಲ್ಲದಿದ್ದರೆ ನ್ಯಾಯ ದೊರೆಯುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಹಾಸನದ ಘಟನೆಯ ಬಗ್ಗೆ ಕಾಂಪ್ರಹೆನ್ಸಿವ್ ಎನ್‌ಕ್ವೈರಿ ಮಾಡಿಸುತ್ತೇನೆಂದು ತಾವೇ ಹೇಳಿದ್ದೀರಿ. ಆದರೆ ಈಗಿನ ಟರ್ಮ್ಸ್ ಆಫ್ ರೆಫರನ್ಸ್ ಪ್ರಕಾರ ಕಾಂಪ್ರಹೆನ್ಸಿವ್ ಎನ್‌ಕ್ವೈರಿಯಾಗುವುದಿಲ್ಲ. ಪಾರ್ಷಿಯಲ್ ಎನ್‌ಕ್ವೈರಿ ಆಗುತ್ತದೆ. ಆದಕಾರಣ ದಯವಿಟ್ಟು ತಾವು ಆ ಒಂದು ಸ್ಟೋಪನಲ್ಲಿ ಇದನ್ನು ಸಹ ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಮಾಡಿದ್ದೇವೆ. ಅಷ್ಟೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದರ ಮೇಲೆ ಸಾಧ್ಯವಿಲ್ಲವೇ ?

ಶ್ರೀ ದೇವರಾಜ ಅರಸ್.—ಇಲ್ಲ.

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸ್ವಾಮೀ, ಹಾಸನದಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ದೌರ್ಜನ್ಯದ ಬಗ್ಗೆ ನಾನು ಹಾಗೂ ಕೆಲವು ವಿದ್ಯಾರ್ಥಿಗಳ ಮುಖಂಡರೊಡನೆ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದಾಗ ಕೆಲವು ಅಂಶಗಳನ್ನು ಅವರ ಗಮನಕ್ಕೆ ತರಲಾಯಿತು ಮತ್ತು ಈ ಚಳುವಳಿಯ ನೆಪದಿಂದ ರಾಜ್ಯದಾದ್ಯಂತ ಅನೇಕ ಗಲಭೆಗಳು ಚಳುವಳಿಗಳು ನಡೆದಿರುವುದು ನಮಗೆಲ್ಲಾ ಗೊತ್ತಿರುವ ವಿಚಾರ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಅನುತಾಪ ತೋರಿಸಿ ಸಾಧ್ಯವಾದಷ್ಟು ಬೇಗ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದು ನನ್ನ ಜ್ಞಾಪಕದಲ್ಲೂ ಇದೆ.

ಎರಡನೇ ವಿಚಾರ ವಿದ್ಯಾರ್ಥಿಗಳು ಈ ಚಳುವಳಿಯಲ್ಲಿ ಭಾಗವಹಿಸಿದಾಗ ಅವರ ಮೇಲೆ ನೂರಾರು ಕೇಸುಗಳನ್ನು ಪೋಲೀಸಿನವರು ಹಾಕಿದ್ದರು. ಇವನ್ನೆಲ್ಲಾ ವಾಪಸು ತೆಗೆದುಕೊಳ್ಳುವುದಾಗಿ ತಿಳಿಸಿದ್ದರು. ಆದುದರಿಂದ ಸೂಕ್ತವಾದ ತೀರ್ಮಾನ ತೆಗೆದುಕೊಂಡು ದೇಶದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇಂತಹ ಎಲ್ಲ ಕೇಸುಗಳನ್ನೂ ತಾವು ವಾಪಸು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಮೂರನೇ ವಿಚಾರ ಇಲ್ಲಿ ನಾನು ಹೇಳಬೇಕಾಗಿರುವುದು ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ವೀರಪ್ಪಗೌಡರವರು ಯಾವುದೇ ರೀತಿಯಾದ ಪ್ರಚೋದನೆ ಮಾಡುವ ಜನರು ಇದ್ದಾರೋ ಅಂತಹವರನ್ನು ಕಂಡುಹಿಡಿದು ಅವರ ಮೇಲೆ ತಕ್ಕ ಕ್ರಮ ಇಲ್ಲವೆ

ಶಿಕ್ಷೆ ಮಾಡಬೇಕು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಬೇಗನೇ ಹಾಸನದ ಬಗ್ಗೆ ಎನ್‌ಕ್ವೈರಿಯನ್ನು ಆರ್ಡರು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್.-ಟಿ. ಕೃಷ್ಣಪ್ಪ.—ಟರ್ಮ್ಸ್ ಆಫ್ ರೆಫರನ್ಸ್‌ನಲ್ಲಿ ಪೋಲೀಸರಿಂದ ಪೋಲೀಸು ಎಕ್ಸೆಸ್‌ಗಳು ಆಗಿವೆಯೇ ಇಲ್ಲವೇ ಎನ್ನುವುದನ್ನೂ ಸೇರಿಸಿದ್ದೀರಾ ಇದರ ಬಗ್ಗೆ ಒಂದು ಮಾತು ತಾವು ಇಲ್ಲಿ ಹೇಳಿದರೆ ಸಾಕು.

ಶ್ರೀ ಡಿ. ದೇವರಾಜ ಅರಸ್.—ನಾನಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ, ಇದರ ಬಗ್ಗೆ ಮತ್ತೆನೂ ಹೇಳುವ ಅವಶ್ಯಕತೆ ಇಲ್ಲ. I am not going to argue here.

Sri H. T. KRISHNAPPA.—Having agreed to a Judicial enquiry, why have you excluded this particular episode from the scope of the Enquiry?

Sri D. DEVARAJ URS.—That is not necessary.

ಅಧ್ಯಕ್ಷರು.—ಈ ದಿವಸದ ಸಭೆಯಲ್ಲಿ ಸುಮಾರು ಮೂರು ಗಂಟೆಯ ಸಮಯದಲ್ಲಿ ಕೆಲವು ವಿಚಾರಗಳು ಇಲ್ಲಿ ಏನು ನಡೆದುವು ಮತ್ತು ಆ ಸಂದರ್ಭದಲ್ಲಿ ಏನೇನು ಮಾತುಗಳು ಬಂದವು ಅವು ಸನುಂಜಸವಾದದ್ದಲ್ಲ ಎಂದು ಹೇಳಬೇಕಾಗಿದೆ. ಇದಕ್ಕಾಗಿ ಆ ಸಮಯದಲ್ಲಿ ನಡೆದ ಎಲ್ಲ ನಡವಳಿಕೆಗಳನ್ನೂ ಎಕ್ಸ್‌ಪಂಜ್ ಮಾಡುವು ದಕ್ಕೆ ಆರ್ಡರು ಮಾಡಿದ್ದೇನೆ. ಅವು ಯಾವುದೂ ಅಧಿಕೃತ ದಾಖಲೆಗಳಲ್ಲಿರಬಾರದು ಎಂದು ಹಾಗೆ ಮಾಡಲಾಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಮಾನ್ಯ ಅಧ್ಯಕ್ಷರೇ, ನಮಗೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಒಂದು ಭರವಸೆಯನ್ನು ಕೊಡಬೇಕಾಗಿದೆ. ಇಂದು ದೇಶ ದಲ್ಲಿ ನಡೆಯುತ್ತಿರುವ ಗಲಭೆಗಳಲ್ಲಿ ಅವರಿವರಿಂದ ಪ್ರಚೋದನೆಗಳು ನಡೆಯುತ್ತಿವೆ ಎಂದು ಕೇಳುತ್ತೇವೆ. ಇದರಲ್ಲಿ ನಮ್ಮ ಕಡೆಯ ಮಾನ್ಯ ಸದಸ್ಯರುಗಳೂ ಇರಬಹುದು ಇಲ್ಲವೇ ಬೇರೆ ಪಕ್ಷದ ಸದಸ್ಯರುಗಳೂ ಇರಬಹುದು. ಎಂತಹವರಿಂದಲೇ ಪ್ರಚೋದನೆಗಳೇನಾದರೂ ಆಗಿವೆ ಎಂದು ಸರಕಾರಕ್ಕೆ ತಿಳಿದುಬಂದರೆ ಅಂತಹವರ ಮೇಲೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುವುದರಲ್ಲಿ ಹಿಂದುಮುಂದು ನೋಡದೆ ಅನ್ಯಾಯಗಳನ್ನು ತಡೆಗಟ್ಟಲು ಪ್ರಯತ್ನ ಮಾಡುತ್ತಾರೆಯೇ ಮತ್ತು ಅನ್ಯಾಯವಾಗಿ ಪ್ರಚೋದನೆ ಮಾಡಿದವರಿಗೆ ಕಾನೂನು ಪ್ರಕಾರ ಬಂದೋಬಸ್ತು ಮಾಡುತ್ತೇವೆಂದು ಭರವಸೆ ಕೊಡುತ್ತಾರೆಯೇ?

ಶ್ರೀ ಡಿ. ದೇವರಾಜ ಅರಸ್.—ನಾನಾಗಲೇ ಹೇಳಿದ್ದೇನೆ ಒಟ್ಟಿನಲ್ಲಿ ಪ್ರಚೋ ದನೆ ಯಾರಿಂದಲೇ ಆಗಿರಲಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ಸರಕಾರ ಹಿಂದುಮುಂದು ನೋಡುವುದಿಲ್ಲ ಮತ್ತು ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

STATEMENT OF THE CHIEF MINISTER RE: FOOD SITUATION IN THE STATE

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ ನಾನು ಈ ಸಭೆಗೆ ದೇಶದ ಆಹಾರದ ಸಮಸ್ಯೆ ಬಗ್ಗೆ ಒಂದು ಹೇಳಿಕೆಯನ್ನು ಇಲ್ಲಿ ಕೊಡಬಯಸುತ್ತೇನೆ.

I. SHORTAGE IN PRODUCTION AND INADEQUATE CENTRAL ALLOCATION

Shortage of food during the current year is a World wide phenomenon. Even a country like Russia had to procure foodgrains from U. S. A. There is not only shortage in the International markets but also a steep rice in the price of foodgrains. Thus there have been very serious limitations on our ability to procure foodgrains through imports to supplement the indigeneous production. In the country as a whole the foodgrains production had dropped for two successive years viz., 1971–72 and 1972–73. This accentuated the upward rise in foodgrain prices which had started during the latter half of 1971. The index number of foodgrains rose from 200.1 in April 1971 to 266.1 in April 1973. Another unusual feature has been that there was no post harvest dip in the prices.

2. Production of foodgrains in our State during 1972–73 has been as follows :—

Rice	17.50
Jowar	13.57
Ragi	8.68
Other Foodgrains and pulses	10.14
	49.89 lakh tonnes.

There was thus a huge shortfall of 13 Lakh tonnes, as compared to the production during the previous year of 62.89 Lakh tonnes. This shortfall in production was mainly due to failure of the monsoon and consequent failure of crops in large areas of the State. This also resulted in our being able to achieve only 50% of the targets for procure-

ment of paddy. No procurement of Jowar and other coarse grains was possible under the circumstances.

3. The total quantity of paddy procured was of the order of 76,000 tonnes, the equivalent rice quantity being around 56,000 tonnes. We have been releasing rice through Fair Price Shops in the State which are nearly 14,000 in number. This has been supplemented with the allotment of wheat and milo received from Government of India. Since September 1972, Government of India have allotted a little over 2 Lakh tonnes of wheat and 50,000 tonnes of milo. It may thus be seen that including our internal procurement and allocations from Government of India we have hardly been able to make up 15 to 20% of the total shortfall in production. Added to this the situation compelled us to allot sizeable quantities of rice to the essentially non-rice eating areas of the State because of failure of coarse grains in those areas and the limited allotment of wheat and milo from the Central pool. To illustrate this point it may be mentioned that since March this year, we have had to allot 15,000 tonnes of rice to the northern districts of the State.

II. MEASURES TO MAINTAIN SUPPLIES OF ESSENTIAL COMMODITIES IN BANGALORE CITY.

4. The needs of the Bangalore City Corporation area have been receiving particular attention from the Government and it can be said with confidence that the steps taken so far to ensure an efficient functioning of the public distribution system, namely to issue special quotas of rice from time to time, to introduce rationing of kerosene (when there was acute scarcity of this commodity) and to supply adequate quantities of wheat products to bakeries, hotels and other establishments, have been largely responsible for keeping the prices down to a moderate level in the City and preventing the situation from going out of control.

5. Among foodgrains, the ration card-holders of Bangalore have been receiving one Kg. of rice per adult

per month. Though this may appear to be a meagre quantity for an individual, the total release of rice amounting to 2,000 tonnes of rice per month in the City has had a stabilising effect on the open market prices. In addition, there have been special releases of rice from time to time to card-holders, varying between 1,000 to 1,700 tonnes per month, continuously since January, 1973, excepting two months in between. "The total issues of rice in the City out of Government stocks were, therefore, very considerable and caused a corresponding reduction in the off-take of rice in the open market and thereby prevented the open market prices from going higher than they have done.

6. The issue of wheat through Fair Price Shops has varied between one Kg. and 2 Kgs. per adult per month and has been quite adequate to meet the requirements of average citizen of Bangalore. Wheat releases in Bangalore City have been upto 4,000 tonnes per month and this being the cheapest cereal (88 paise per Kg) these releases have again helped to keep the prices down in the City.

7. Sugar has been issued at the scale of One Kg. per adult per month and for most families this is quite sufficient to meet their monthly requirements.

8. Recently, pulses were also issued through fair price shops and through selected co-operative Institutions. The total quantity of pulses released in Bangalore City during August and September 1973 is as follows :

(a)	Bengal Gram Dhall	9.8 tonnes.
(b)	Tur-dhall	46 tonnes.
(c)	Bengal-gram	1,715 tonnes.
(d)	Green gram	167 tonnes.

9. There was a marked difference between the open market prices and the prices of these pulses issued through fair price shops. In addition, the Directorate of Food & Civil supplies has been arranging for the issue of wheat products such as maida and soji through fair price shops for the house-holds. Sale of wheat products has also been

made through selected co-operative retail outlets for the greater convenience of the public. Maida is being supplied in adequate quantities to all the bakeries in the City as a result of which there has been no shortage of bread at any time and the prices of bread have been steady. Wheat product are also being supplied in adequate quantities to all the hotels in the City.

10. In addition to the above said measures, Government have, in an effort to ensure availabilty of rice in the City at reasonable prices, issued several permits under levy-exemption to wholesale dealers among both merchants and co-operative institutions, besides industrial establishments, to bring rice from the neighbouring districts such as Mandya for sale in the City. Sales of such rice were made particularly for the benefit of slum dwellers in slum areas and in labour areas. At present, the Mysore State Co-operative Marketing Federation is transporting rice to Bangalore and this rice is to be sold through all fair price shops at perodical intervals to ration-card-holders in the City.

11. Movement of rice, at compartively high open-market prices, is also being organised from districts like Raichur and Bellary, again under levy-exemption.

12. Rationing of kerosene was introduced in Bangalore City with effect from June 1973, and has been very successful in making kerosene available to all the residents of the City. The sale of vanspathi throuhg fairprice shops was arranged in the month of August 1973, when the rates of edible oil had gone up very high.

III. Special Arrangements made to meet the needs of the drought affected Districts and South Kanara District.

13. Jowar is the staple food of the people in the northern districts of our State, which were affected by serious drought. As both khariff jowar and rabi jowar had failed completely in the area, Government did not have any stock of procured jowar or other coarse food-grains. In addition

to diverting nearly 15,000 tonnes of rice to these areas large quantities of wheat were allotted for being released to the consumers through the public distribution system. The scale of ration was maintained at 8 Kg. of foodgrains per adult per month consisting of rice, wheat, milo etc. Atleast a minimum of 100 fair price shops were opened in each of the badly affected Taluks. It was ensured that each fair price shop had an initial stock of 20 quintals of foodgrains and the Tahasildars were asked to purchase the stocks from the P. D. Account and arrange for the transport also. Owing to these several measures the situation could be tackled effectively. Hybrid Jowar has started moving into these areas from Chitradurga District. However, allotment of wheat and milo is being maintained at a high level to meet the needs of the consumers.

14. Special measures were also taken to meet the needs of South Kanara District. In addition to stepping up the monthly allotments out of the procured stocks more than 2 lakh quintals of rice were moved into the district through purchases from the open market in other surplus districts on permits arranged by Government. In addition, large quantities of wheat and milo were also allotted to the district. With the immediate prospect of commencement of harvest of paddy in the district the situation is well under control.

IV. PROCUREMNT POLICY FOR THE CROP YEAR 1973-74.

15. The State's Food Policy so far has been to acquire buffer stocks of paddy and jowar to cater to the Urbun and other vulnerable sections of the population. With a view to acquiring adequate buffer stocks to serve this purpose, two orders styled "The Mysore Paddy Procurement Levy Order" and "The Mysore Jowar Procurement Levy Order" respectively, were passed in thy year 1966 under section 3 of the Essential Commodities Act (with the prior concurance of the Government of India). Under the provisions of these orders certain scales of levy based on the acreage under each crop in each cultivator's holding have

been fixed and the cultivators required by a written notice to deliver the quantities levied.

16. This system was enforced last year also, and a target of 1.5 lakh tonnes of paddy and 75,000 tonnes of jowar was fixed. But on account of wide-spread failure of crops in the jowar growing areas-in fact, famine conditions prevailed there-no jowar could be procured at all. Even the procurement of paddy was seriously affected and hardly 50% of the target was reached.

17. Under the existing levy orders, rain-fed paddy holdings of 4 acres and less and irrigated paddy holdings of one acre and less are exempt from levy and a progressive scale of levy for holdings exceeding these limits has been fixed as indicated in Annexure-I. The proposed revised scales of prices are indicated in the Statement at Annexure-II. Formal orders are expected to be issued after receipt of concurrence from Government of India. The upto-date list of Scheduled Projects is being prepared. It may be seen that Government have now taken a decision to exempt holders of paddy lands of less than one acre of irrigated land and less than 2 acres of rain-fed lands. Holders of one acre of irrigated paddy 1 and 2 acres of rain-fed land will be subject to levy of one quintal. Holders of more than one acre of irrigated land and more than 2 acres the rain-fed land will be subject to levy at 50% more than the existing scales of levy. In the case of jowar also the increase over the present scales is 50%. Ragi is being brought in the scheme for the first time with the same scales of levy as jowar. The increase in the scales of levy is meant to enable Government to procure larger quantities to cater to the public distribution system even more effectively.

18. The recent conference of Chief Ministers held in New Delhi recommended a higher procurement price this year both for paddy and for jowar and ragi. Government will shortly be announcing the Procurement prices for Paddy, Jowar and Ragi. Till the new prices are announced we are adopting the existing support prices ranging

from Rs. 63 to Rs. 70 per quintal with the understanding that the difference will be paid to the growers in due course. To start with we may procure in South Kanara at the rate of Rs. 70/- per quintal. Last year Somewhere in the order of Rs. 56/- or so. Now it is going to be Rs. 70/- in South Kanara and if the prices are fixed and announced by the Government of India, whether it is less or more; if it is little more, we are going to pay them whatever is extra over and above Rs. 70/-per qunital. Even if it is less, the Government is not going to take the money back from them and see that the farmer will get Rs. 70/-per qunital.

As far as High Breed. Jowar is concerned, I have already stated if the prices are go down, the Government will buy at Rs. 70/-. Fortunately it has not gone below Rs. 70 and the question has not arisen. The procurement targets will be 2.75 lakh tonnes of rice and 2 lakh tonnes of coarse grains. The procurement will be done through the newly established Karnataka Food & Civil Supplies Corporation. Funds are being arranged through Commercial Banks. Commercial Banks have come forward to give the finance necessary for this trade.

ANNEXURE - I

Statement showing the remissions in the quantum of levy in respect of drought affected and flood affected areas.

i)	Total remission	...	if the annevari is below 4 annas;
ii)	50% remission	...	if the annevari is between 4 annas and 6 annas;
iii)	25% remission	...	if the annevari is between 6 annas and 8 annas.

ANNEXURE — II

JOWAR

Scale of levy

Sl. No.	Scale	Lands irrigated under (a) Government sources of irrigation (b) wells	Other lands
1.	In respect of every acre of the first 10 acres of the holding of the grower.	1 quintal per acre	25 Kgs. per acre
2.	In respect of every acre of the remaining acres of the grower.	2 quintals per acre	30 Kgs. per acre

Proviso:— There shall be no levy in respect of a holding, the extent of which is only one acre or less.

ANNEXURE — II

PADDY

Quantity to be levied

	Land under scheduled projects.	Lands under irrigation projects / works other than scheduled projects having an assured supply of water, and well-irrigated lands.	
	1	2A	2B
1.	In respect of the first acre of the holding of the grower.	NIL	NIL
2.	In respect of the second to the sixth acre of the holdings of the grower.	2 Quintals per acre.	1½ Quintals per acre.

1	2A	2B
3. In respect of the seventh acre to the eleventh acre of the holdings of the grower.	4 Quintals per acre.	3 Quintals per acre.
4. In respect of the remaining portion of the holdings of the grower.	6 Quintals per acre.	4½ Quintals per acre.

RAINFED LANDS

PADDY

(1) Scale	(2) Quantity to be levied.
1. In respect of the first four acres of the holdings of the grower.	NIL
2. In respect of the fifth acre to the ninth acre of the holdings of the grower.	1 Quintal per acre.
3. In respect of the tenth acre to the fourteenth acre of the holdings of the grower.	2 Quintals per acre.
4. In respect of the remaining portion of the holdings of the grower.	3 Quintals per acre.

PART-A

Proposed Scales of Levy for Paddy during 1973-74.

Lands under Scheduled Projects.

Sl. No. (1)	Scale. (2)
1. In respect of holdings of less than one acre in extent.	Nil.
2. In respect of the first acre of the holding of the grower.	One quintal per acre.

1		2
3.	In respect of every acre of the holding of the grower where such holding exceeds one acre but does not exceed six acres.	Three quintals per acre.
4.	In respect of every acre of the holding of the grower where such holding exceeds six acres but does not exceed eleven acres.	Six quintals per acre.
5.	In respect of every acre of the remaining acres of the holding of the grower.	Nine quintals per acre.

PART-B.

Lands under irrigation project works other than scheduled projects having an assured supply of water and lands irrigated by use of water drawn from wells.

Sl. No. (1)		Scale (2)
1.	In respect of holdings of less than one acre in extent.	Nil.
2.	In respect of the first acre of the holding of the grower.	One quintal.
3.	In respect of every acre of the holding of the grower where such holding exceeds one acre but does not exceed six acres.	Two and a quarter quintals per acre.
4.	In respect of every acre of the holding of the grower where such holding exceeds six acres but does not exceed eleven acres.	Four and a half quintals per acre.
5.	In respect of every acre of the remaining acres of the holding of the grower.	Six and three fourths quintals per acre.

PART-C.

Rainfed and other lands.

Sl. No. (1)		Scale (2)
1.	In respect of the holding of the grower which is less than two acres in extent.	Nil.
2.	In respect of the holding of the grower which is two acres in extent.	One quintal.
3.	In respect of every acre of the holding of the grower where such holding exceeds two acres but does not exceed nine acres.	One and a half quintals per acre.
4.	In respect of every acre of the holding of the grower where such holding exceeds nine acres but does not exceed fourteen acres.	Three quintals per acre.
5.	In respect of every acre of the remaining acres of the holding of the grower.	Four and a half quintals per acre.

PART–D.

Scale of Ragi/Jowar.

[See clause 3 (1)]

Sl. No.	Scale.	Lands irrigated under (a) Government source of irrigation (b) wells.	Other lands
1.	In respect of the first acre of the holding of the grower.	Nil	Nil
2.	In respect of every acre of the holding of the grower where such holding exceeds One acre but does not exceed ten acres.	One and a half quintals per acre.	Thirty seven and a half Kgs. per acre.
3.	In respect of every acre of the remaining acres of the holding of the grower.	Three quintals per acre.	Forty five Kgs. per acre.

(M. D. GOVINDARAJ)
Under Secretary to Government.
Food and Civil Supplies Department.

5.00 P. M.

Madam Speaker, In addition to this, I would like to take the house into confidence and say about the attempts that Government is making to lessen the rigours of the shortage of particularly rice and other cereals.

Yesterday, the Hon. Food Minister has gone to Tamil Nadu. I am glad to say that to-day she talked to me over the phone and informed me that she was able to get from Tamil Nadu Government nearly 3,000 tonnes of paddy, rice and coarse grains like ragi.

.. ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ಸರ್ಕಾರದ ರೇಟು ಏನು ? ಹೆಚ್ಚು ರೇಟು ಕೊಟ್ಟರೆ ನಮ್ಮ ರೈತರೇ ಕೊಡುತ್ತಾರೆ.

ಶ್ರೀ ಡಿ.ದೇವರಾಜ ಅರಸ.— ಸ್ವಾಮಿ, ರೈತರಿಗೆನೇ ೧೮೦ ರೂಪಾಯಿ ರೇಟು ಕೊಡುತ್ತೀನೆ ಕೊಡಿಸುತ್ತೀರಾ ? ಮದ್ರಾಸನವರಿಗೆ ಕೊಡುವ ರೇಟನ್ನೇ ಕೊಡುತ್ತೇವೆ ಕೊಡಿಸುತ್ತೀರಾ?

ಶ್ರೀ ಕೋಣಂದೂರು ಲಿಂಗಪ್ಪ.— ಅಲ್ಲಿ ನೀರಾವರಿ ಹೆಚ್ಚುಮಾಡಿ ಜೆನ್ನಾಗಿ ಬೆಳೆಸಿದ್ದಾರೆ. ನೀವು ೨೫ ವರ್ಷದಿಂದಲೂ ನಮ್ಮ ರಾಜ್ಯದಲ್ಲಿ ಎಷ್ಟು ನೀರಾವರಿ ಮಾಡಿಸಿದ್ದೀರಾ ?

Sri D. DEVARAJ URS.— We have to see the situation. ನೀವು ಈಗ ಮಾತನಾಡುತ್ತಾ ಇರುವ ವಿಷಯ ಬಿಟ್ಟು ಬಿಟ್ಟು ಅದರ ಬೆಲೆ ಎಷ್ಟು, ಕಾಳು ಎಷ್ಟು ಎಂದು ಕೇಳುತ್ತಿದ್ದೀರಿ. ಇವೆಲ್ಲ ಏತಕ್ಕೆ ಬೇಕು? Now we are getting rice and we are also getting ragi. The Hon. Food Minister also informed that she is trying to get broken rice. According to the information received, Tamil Nadu Government has agreed to supply 2000 tonnes of rice and 1000 tonnes of ragi. Apart from this, I am asking the Hon. Chief Minister of Tamil Nadu to send another 1000 tonnes of broken rice. The Hon. Chief Minister of Tamil Nadu wants it as a kind of barter for electricity. Depending on the availability, I have also promised nearly 30 million units of electricity. We are prepared to give it though we have some shortages. I felt that in whatever manner it was possible, I should procure some rice immediately to give relief to the consumer, particularly in a City like Bangalore and some other places.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ತರಿಸುತ್ತಾ ಇರುವ ಆಹಾರ ಧಾನ್ಯ ಕೇವಲ ಸಿಟಿಗೆ ಮಾತ್ರ ಆಯಿತು. ಆದರೆ ಹಳ್ಳಿಯಲ್ಲಿರುವ ಜನರು ಬಹಳ ದುರ್ಬಲ ವರ್ಗದವರಾಗಿದ್ದಾರಲ್ಲಾ ಅವರ ಬಗ್ಗೆ 'ಏನೂ ಹೇಳಿಲ್ಲಾ'.

SRI D. DEVARAJ URS.— It is coming to the State. We will see where it will be distributed. This is a good deal.

Sri K. PUTTASWAMY.— When such offers are made, it would have been better had it been carried out as a gesture, specially when we are in difficulties.

Sri D. DEVARAJ URS.— Let us not go into the merit. We will still say it is a good gesture.

ಶ್ರೀ ಪಿ. ಎಂ. ಬಾಂಗಿ.— ಮೇಜಿಗೆ ಸಂಬಂಧಪಟ್ಟ ಹಾಗೆ ತಾವು ಏನೂ ಹೇಳಿಲ್ಲಾ?

ಶ್ರೀ ಡಿ. ದೇವರಾಜ ಅರಸ.— ಅದನ್ನೂ ಕೂಡ ಪ್ರೊಕ್ಯೂರ್ ಮಾಡುವ ಹಾಗಿದ್ದರೆ ಅದನ್ನೂ ಮಾಡೋಣ. ಈಗ ಇಂಪಾರ್ಟಂಟ್ ಫುಡ್‌ಗ್ರೈನ್ಸ್ ಏನು ಇದೆಯೋ ಅದನ್ನು ಮಾತ್ರ ಹೇಳುತ್ತಿದ್ದೇನೆ. Now we are making arrangements to move about 20,000 quintals of hybrid jawar from the District of Chitradurga as well as Bellary and some other places. Therefore, with this large augmentation of the available quantity we have today, I am sure we will be able to tide over the difficulties in the coming 2½ to 3 months. Of course, I must say that we may not be in a position to give everybody as much as they want. But certainly with this much of Jawar, ragi and rice coming to the State.

I think every citizen is likely to get reasonable quantity of either rice or some portion of wheat or some portion of ragi or jawar or all these put together. I am sure this is going to keep the market going and this may not allow the open market price to go unreasonably high.

ಶ್ರೀ ಹೆಚ್. ಟಿ. ಕೃಷ್ಣಪ್ಪ— ಇನ್ನು ೨ ತಿಂಗಳಿಗೆ ಬೇಕಾದ ಆಹಾರದ ಅವಶ್ಯಕತೆ ಏನು? ಅದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಾ?

SRI D. DEVARAJ URS.— We have got a population of 20 lakhs in Bangalore. We have been issuing 1 Kg. of rice per head besides 5 Kgs. of rice now and then. This comes to 2,000 tonnes month. On an average we have been releasing 4 to 5,000 tonnes of rice every month in the State. Apart from

this, we have been releasing 4,000 tonnes of wheat every month.

ಶ್ರೀ ಕೆ. ಹೆಚ್. ಹನುಮೇಗೌಡ— ಬೆಂಗಳೂರು ಬಗ್ಗೆ ಮಾತ್ರ ಹೇಳುತ್ತಿದ್ದೀರಾ ಬೇರೆ ಜಿಲ್ಲೆ ಬಗ್ಗೆಯೂ ಏನು ವ್ಯವಸ್ಥೆ ಮಾಡಿದ್ದೀವೆ ಎಂದು ಹೇಳುತ್ತೀರಾ?

SRI D. DEVARAJ URS.— As I told you I do not have the details. You know for the drought-stricken areas out of 40,000 tonnes of foodgrains supplied, nearly 20,000 tonnes of wheat was sent. Here and there some times we have released 2,000 tonnes and 5,000 tonnes everywhere. Therefore we are confident that we will get over this difficulty in the coming two or three months. Luckily this time the Heavens have been considerate and we have its blessings. As a result, we have got rains everywhere: it is not only timely rains but also sufficient rains. This time we are so lucky that I came to know from some of the hon. members of this House who had gone to their respective constituencies that even in our northernmost part of our State like Bidar & Gulbarga, there are people who have grown some kind of local variety of foodgrain and that in one acre they have grown 15 to 20 bags.

ಶ್ರೀ ಜೆ. ಎಲ್. ಕಬಾಡಿ— ನಾನು ಅದೇ ಜಿಲ್ಲೆಯಿಂದ ಬಂದವ ಸ್ವಾಮಿ. ಒಂದು ಎಕರೆಗೆ ೧೫–೨೦ ಚೀಲ ಬೆಳೆಯುತ್ತದೆ ಎಂದು ಹೇಳುವುದು ಸರಿಯಲ್ಲ.

SRI D. DEVARAJ URS.— There are some places where they have grown that quantity.

ಶ್ರೀ ಎಸ್. ಬಂಗಾರಪ್ಪ— ನಿಮ್ಮ ಇಲಾಖೆಯ ಲೆಕ್ಕದಲ್ಲಿ ಆ ರೀತಿ ೨೦–೩೦ ಚೀಲ ಬೆಳೆದಿದೆ ಎಂದು ತೋರಿಸಿರಬಹುದು.

ಶ್ರೀ ಡಿ. ದೇವರಾಜ ಅರಸ— ನನ್ನ ಜೊತೆಯಲ್ಲಿ ಬನ್ನಿ ಸ್ವಾಮಿ, ಆ ಕಣದಲ್ಲೇ ಕೂರಿಸಿ ಅಲ್ಲೇ ಅಳೆಸಿ ಕೊಡಿಸುತ್ತೇನೆ. ಅಲ್ಲಿ ಬೆಳೆದಿರುವುದು ನನಗೆ ಗೊತ್ತಿದೆ. If they are really farmers, they would have appreciated and understood. I merely mentioned that there one or two farmers who have grown to that extent. If the hon. Member did not grow to that extent, does he think that nobody in that world grows? Now at least I can say this much, that throughout the State rains are good and they are timely and fortunately the crops also are very good. As the result of good rains, I am sure we are going to have a

bumper crop and whatever levy the Government have proposed, I am confident that we will be in a position to get. I must also mention one other point. The Hon. Minister for Agriculture must have already given a statement as to the manner in which the fertilisers have been procured and made available to the people and also as to the quantum as well as the availability. This year, as I have already stated, we have been able to procure more chemical manures than last year, and that is being made available. From one angle. that is a healthy sign but from the point of view of supply, we are finding it extremely difficult. Almost every farmer in the State wants at least 75 per cent of the farmers want - fertilisers to-day. Whether it is well irrigation or rain-fed cultivation. Everybody wants to use this manure, because they are convinced that they will get a better crop if they use the manure. If there is good rain chemical manure could be used for dry crops like ragi also. They are using chemical manures for ragi. They have realised the utility of the ch mical manure. Every farmer in the State wants chemical manure. That is why we find there is so much of rush for chemical manure and sometimes, it has led to some 'galata' here and there. We may get some more chemical manure about 3 thousand tons or so. As soon as we get it, even that will be made available primarily to the paddy cultivating areas, where the manure is badly needed.

Hon. Member Sri Lingappa was making some remark regarding procurem nt. I want his full co operation as well as the co-operation of all the hon. Members. I make an appeal to the hon. Members for co-operation. After all, for whom are we procuring? Is it for the Government to make trade elsewhere? This is purely to take care of the section of people who do not own land, and who are engaged in other avocations in cities and other places. You have been hearing about the difficulties that people are facing with regard to food in almost all the towns. We must procure not only as much quantity as would be sufficient for being made available to the people in the comming year, but

also we must procure in such a way that some buffer stock is maintained by the Government for the lean month or lean season. That is why a decision has been taken by the Government to not merely procure paddy but also jowar and ragi. We want to build up a buffer stock.

With regard to prices, I must say one thing here. The price of paddy was fixed in the year 1963 at 52 rupees per quintal. I believe it was revised twice and it was again revised last time. After all the three revisions put together, the paddy price was not allowed to go beyond 58 or 59 rupees, in our state, at any rate. Last year, Government made the best effort with the Central Government to fix the rate of the first quality paddy at the rate of 75 rupees but the Government of India would not agree. They turned down our proposals. They wanted us to go on with the rate that had already been fixed, only with an increase of two rupees from the previous year. It is Government of India's policy and we failed to convince them that this rate would not work. The result was that we could not procure the required target and even the farmers resented the prices that we were offering. With great difficulty, we were able to procure only 76,000 tons of paddy, whereas the target was 1,50,000 tons. Since last year, Government is making consistent efforts to see that the pabdy procurement price is fixed at a higher rate than what it was. At a rate which should apper to be reasonable, and which should appear to be at least sufficient to meet the cost of cultivation of the farmer, if not highly profitable. And, I am glad to say that the issue was again now taken up by the Mysore Government and fought out with the Government of India people and it had, at least, had a favourable result. Even the Food Minister accepted, during the Food Conference the other day, to fix the coarser variety of paddy at a rate somewhere between 71 and 75 rupees. It may be fixed at 72 or 73 rupees. The Central Government has to fix it. Shortly, I expect an announcement. That is in respect of the coarse variety. Normally, paddy is classified into three varieties.

One is coarse rice, other is medium and another is fin rice. So for these 3 varieties with some difference between variety to vriety we can fix the rate. I do not want to say anything unless I specifically get an indication from the Government of India as to what is going to be the procurement price for coarse rice. I may say one thing here & that is we are going to give reasonable price for the paddy which the farmer should welcome. We have also this time taken into account the probable cost of cultivation per acre of paddy and has fixed the price. The farmers may not have anything to grumble with regard to the price. It may not be profitable price, but it is a reasonable good price atleast. As farmers talked to me; if the Government were to promise to maintain this price not only for one year or 3 years, they would be very happy and they will be willing to give whatever the levy put by the Government. This price that we are going to fix is not a profitable price if we take into consideration the cost of cultivation per acre and the price we have fixed now will be retained for 3 years to come and we are not going to reduce it.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ರೇಟನ್ನು ನಿಗದಿ ಮಾಡುವುದು ಸರಿ, ಅದೇ ರೀತಿ ಫರ್ಟಿಲೈಸರ್ಸ್ ರೇಟನ್ನು ಮೂರು ವರ್ಷಗಳ ವರೆಗೆ ನಿಗದಿ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ.—ಅದು ನನ್ನ ಕೈಯಲ್ಲಿಲ್ಲ.

ಶ್ರೀ ಪುಟ್ಟಸ್ವಾಮಯ್ಯ.—ಈ ಸಂದರ್ಭದಲ್ಲಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತಂದರೆ ಉಚಿತ ಎಂದು ಕಾಣುತ್ತದೆ. ರಾಜ್ಯದಲ್ಲಿ ಅಭಾವವಿರುವುದಕ್ಕೆ, ಲೆವಿ ಹಾಕಿದ್ದನ್ನು ತಮ್ಮ ಸರ್ಕಾರದವರು ನಿಷ್ಪಕ್ಷಪಾತವಾಗಿ ಪಸೂಲು ಮಾಡಿಲ್ಲ, ತಮ್ಮ ಪಕ್ಷದವರೇ ಲೇವಿ ಕೊಡದೆ ಬಹಳ ಜನ ಉಳಿದಿದ್ದಾರೆ. ಎರಡನೆಯದಾಗಿ, ರಾಜ್ಯದಲ್ಲಿದ್ದಂಥ ಆಹಾರಪದಾರ್ಥಗಳನ್ನು ಒಂದು ಕಡೆಯಿಂದ ಒಂದು ಕಡೆಗೆ ಸಾಗಿಸುವುದಕ್ಕೆ ಪ್ರಭಾವಕ್ಕೆ ಒಳಗಾಗಿ ಪರ್ಮಿಟ್‌ಗಳನ್ನು ಕೊಟ್ರು. ಮೂರನೆಯ ದಾಗಿ ಪರಿಸ್ಥಿತಿ ಉಲ್ಬಣವಾಗುವುದಕ್ಕೆ ಅಂತರ್ ಜಿಲ್ಲಾ ನಿರ್ಬಂಧ ಪ್ರಾಮುಖ್ಯವಾದ ಕಾರಣ ಎಂದು ಬಹು ಸಂಖ್ಯಾತರ ಅಭಿಪ್ರಾಯ.

ಶ್ರೀ ಡಿ. ದೇವರಾಜ ಅರಸ—ಅಂತರ ಜಿಲ್ಲಾ ನಿರ್ಬಂದದಿಂದ ರಾಜ್ಯದ ಆಹಾರದ ಕೊರತೆ ಬಹುಮಟ್ಟಿಗೆ ಉಲ್ಬಣವಾಗುತ್ತಾ ಇರುವುದು ನಿಂತಿದೆ ಎಂದು ನಾನು ತಿಳಿಯುತ್ತೇನೆ. ಮತ್ತೆ ಅವರು ನಮ್ಮ ಪಕ್ಷದವರಿಗೆ ಪರ್ಮಿಟ್ಟುಗಳನ್ನು ಕೊಟ್ಟರಿ ಎಂದು ಹೇಳುತ್ತಿದ್ದಾರೆ, ಇದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಂದು ಪಟ್ಟಿಯನ್ನು ಮಾಡಿಸಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ತಮ್ಮ ಪಕ್ಷದ ವರಿಷ್ಠರು ಅಪೀಲು ಮಾಡಿಕೊಳ್ಳುತ್ತಿದ್ದಾರೆ ಅದಕ್ಕೆ ಕೊಟ್ಟೆರಿ ಎಂದು ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ.—ಅದನ್ನು ಹೇಗೆ ಊಹೆ ಮಾಡುತ್ತೀರಿ ? ಎಲ್ಲಾ ಕಡೆ ಜಿಲ್ಲಾಧಿಕಾರಿಗಳಿಂದ ವಿಚಾರ ಮಾಡಿಸುತ್ತೇನೆ. ನಮ್ಮ ಪಕ್ಷದವರು ಎಂದು ತಾವು ಏನು ದೂಷಣೆ ಮಾಡುತ್ತಿದ್ದೀರಿ, ಅದು ನಿಜವಾದ ಮಾತಲ್ಲ. ಮತ್ತು ಈ ಪ್ರವೃತ್ತಿ ಒಳ್ಳೆಯದಲ್ಲ. ಎಲ್ಲಿ ಎಡವುತ್ತಿದ್ದೇವೆ ಎನ್ನುವುದು ನನಗೆ ಗೊತ್ತಿದೆ. ಒಂದು ಪರ್ಸೆಂಟ್ಟಿಗೆ ೪—೫ ಸಾರಿ ಹೊರಗಡೆ ಸಾಮಾನನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳುತ್ತಿದ್ದೀರಿ, ಇದಕ್ಕೆ ಬೇಕಾದರೆ ಜಿಲ್ಲಾ ಕಚೇರಿಗೆ ನೀವು ಹೋಗಿ ವಿವರ ಕೇಳಿದರೆ ಕೊಡಿ ಎಂದು ಹೇಳುತ್ತೇನೆ. ಅಥವಾ ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಇಲ್ಲಿ ಕೇಳಿದರೆ ಉತ್ತರ ಕೊಡುತ್ತೇನೆ. ರೈತರು ಲೆವಿಯನ್ನು ಕೊಡದೆ ಇರುವುದಕ್ಕೆ ನೀವು ಅದನ್ನು ಪರಿಯಾಗಿ ವಸೂಲು ಮಾಡಿಲ್ಲ; ಎಂದು ಏನು ಹೇಳಿದ್ದೀರಿ, ಅದಕ್ಕೆ ನಾನು ೭೬ ಸಾವಿರ ಟನ್ ಭತ್ತವನ್ನು ವಸೂಲು ಮಾಡಿದ್ದೇವೆ ಎಂದು ಹೇಳುತ್ತೇನೆ. ಕೆಲವು ಜಿಲ್ಲೆಗಳಲ್ಲಿ ಟಾರ್ಗೆಟ್ ಫಿಕ್ಸ್ ಮಾಡಿದ್ದಕ್ಕಿಂತ ಸ್ವಲ್ಪ ಜಾಸ್ತಿ ವಸೂಲಾಗಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಯಾವ ಯಾವ ಕಡೆ ಸಿಕ್ಕಿದೆ ?

ಶ್ರೀ ಡಿ ದೇವರಾಜ ಅರಸ.—ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ನಾವು ಏನು ಟಾರ್ಗೆಟ್ ಫಿಕ್ಸ್ ಮಾಡಿದ್ದೇವೋ ಅದಕ್ಕಿಂತ ಸ್ವಲ್ಪ ಜಾಸ್ತಿ ಸಿಕ್ಕಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಉಪಾಯ ಮಾಡಿ ವಸೂಲು ಮಾಡಿದ್ದಾರೆ

ಶ್ರೀ ಡಿ. ದೇವರಾಜ ಅರಸ.—ಯಾರಿಗಾದರೂ ದಾಕ್ಷಿಣ್ಯಕ್ಕೆ ಒಳಗಾಗಿ ಲೇವಿ ವಸೂಲು ಮಾಡುವುದನ್ನು ಬಿಟ್ಟಿದ್ದೇವೆಯೋ ಎಂದು ಮಾನ್ಯ ಲಿಂಗಪ್ಪನವರೇ ಹೇಳಲಿ.

ಶ್ರೀ ಕೋಣಂದೂರು ಲಿಂಗಪ್ಪ—ನಮ್ಮಲ್ಲಿ ಒಂದು ಎಕರೆಗೆ ೨—೩ ಪಲ್ಲದ ಮೇಲೆ ಬೆಳೆಯುತ್ತಾ ಇಲ್ಲ.

ಶ್ರೀ ಡಿ. ದೇವರಾಜ ಅರಸ.—ಅಯ್ಯೋ ಪಾಪ, ಯಾವುದೋ ಓಬಿರಾಯನ ಕಾಲದಲ್ಲಿ ಇದ್ದೀರಿ ತಾವು.

ಶ್ರೀ ಕೋಣಂದೂರು ಲಿಂಗಪ್ಪ.—ಬೇಕಾದರೆ ನಮ್ಮ ಬದ್ರಿಯವರನ್ನೇ ಕೇಳಿ?

ಶ್ರೀ ಡಿ. ದೇವರಾಜ ಅರಸ.—ಹಾಗಲು ಕಾಯಿಗೆ ಬೇವಿನಕಾಯಿ ಸಾಕ್ಷಿ. ಎಲ್ಲಾ ಬಿಟ್ಟು ಬದ್ರಿಯವರನ್ನು ಕೇಳಲಿಕ್ಕೆ ಹೊರಟಿದ್ದೀರಲ್ಲ, ಎನು ವಿಚಿತ್ರವಾದ ಸಂಗತಿ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಲಕಾಯಿ ಯಾರು ? ಬೇವಿನಕಾಯಿ ಯಾರು ?

ಶ್ರೀ ಬಿ. ಪುಟ್ಟಸ್ವಾಮಯ್ಯ —ಏನು ನಮ್ಮನ್ನು ಇಲ್ಲಿ ಕಥೆ ಕೇಳಿಕೊಂಡು ಕೂತುಕೊಳ್ಳುವ ಹಾಗೆ ಮಾಡುತ್ತಿದ್ದೀರಿ, ರಾಜ್ಯದಲ್ಲಿ ಅಭಾವ ಸೃಷ್ಟಿ ಮಾಡಿ ನಮಗೆ ಇಲ್ಲಿ ಉಪಶಮನ ಮಾಡುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ.—ನಿಮ್ಮ ಪಕ್ಷದವರು, ನೀವು ಎಂಥ ಭಾಷಣ ಮಾಡಿದರೂ ಏನೂ ನಡೆದಿಲ್ಲ. ನಿಮ್ಮ ಅಕ್ಕಿ ಜನಗಳಲ್ಲಿ ಬೇಯುವುದಿಲ್ಲ, ಜನರು ಬುದ್ಧಿವಂತರಾಗಿದ್ದಾರೆ, ಎಲ್ಲಿ ತಪ್ಪು ಮಾಡಿದ್ದೇವೆ ಎನ್ನುವುದನ್ನು ಅವರಿಂದ ಕೇಳಿ ತಿಳಿದುಕೊಳ್ಳಬೇಕು. ನಿಮ್ಮ ಪಕ್ಷದವರು ಇದನ್ನು ತಿಳಿದುಕೊಳ್ಳಬೇಕು. ಜನ ನೀವು ಹೇಳಿದ್ದನ್ನೆಲ್ಲಾ ಕೇಳುತ್ತಾರೆಯೇ ? ನಾವು ಹಿಂದೆ ಕೊಡದೆ ಇದ್ದಂಥ ರೇಟನ್ನು ಒದಗಿಸಿಕೊಡುವ ಪ್ರಯತ್ನ ಮಾಡಿದ್ದೇವೆ. ಅನೇಕ ಜನ ರೈತರಲ್ಲಿ ನಾವು ಮಾತ ನಾಡಿದ್ದೇವೆ. ನಾವು ಕೊಡತಕ್ಕ ರೇಟನ್ನು ಬಹುಮಟ್ಟಿನ ರೈತರು ಒಪ್ಪಿದ್ದಾರೆ. ಇಷ್ಟೊಂದು ರೇಟನ್ನು ನೀವು ಕೊಡುವುದಾದರೆ ಕಿರಿಕಿರಿಯಿಲ್ಲ, ಲೇವಿ ಪ್ಯಾಡಿಯನ್ನು ಕೊಡುವವರಿದ್ದೇವೆ ಎಂದು ಹೇಳಿದ್ದಾರೆ. ಮೂರು ವರ್ಷಗಳ ಕಾಲ ಇದೇ ರೇಟನ್ನು ಇಟ್ಟುಕೊಂಡು ಹೋಗುವುದಕ್ಕೆ ಸರ್ಕಾರ ಮನಸ್ಸು ಮಾಡಿದೆ ಎಂದು ನಾನು ಹೇಳಿದೆ. ಇದರಲ್ಲಿ ಒಂದು ಅರ್ಥ ಇದೆ. ನಿಮ್ಮಲ್ಲಿ ಕೆಲವರು ಜಮೀನು ಇದ್ದವರು ಇದ್ದೀರಿ, ಇಲ್ಲದವರು ಇದ್ದೀರಿ, ಸ್ವಲ್ಪ ಯೋಚನೆ ಮಾಡಿ. ಒಂದೊಂದು ವರ್ಷ ಬೆಳೆ ಚೆನ್ನಾಗಿ ಬಂದಾಗ ರೇಟನ್ನು ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ. ವೈಸ್ರಾಯ್ ರಾಜ್ಯದಲ್ಲಿ ಒಂದೇ ಆಲ್ಲ, ತಮಿಳುನಾಡಿನಲ್ಲಿ, ಆಂಧ್ರಪ್ರದೇಶದಲ್ಲಿ, ಮತ್ತು ಮಧ್ಯ ಪ್ರದೇಶದಲ್ಲಿ ಎಲ್ಲಾ ಕಡೆಯೂ ಇಡೀ ಭಾರತದಲ್ಲಿ ಸಣ್ಣ ಪುಟ್ಟ ಪಾಕೆಟ್ಸ್‌ಗಳನ್ನು ಬಿಟ್ಟರೆ ಎಲ್ಲಾ ಕಡೆಯೂ ಬೆಳೆ ಚೆನ್ನಾಗಿದೆ. ಯಾವಾಗ ಬೆಳೆ ಚೆನ್ನಾಗಿ ಆಗುತ್ತದೆ, ಆವಾಗ ಮಾರುಕಟ್ಟೆಯಲ್ಲಿ ಬೆಲೆ ಸ್ಲಂಪ್ ಆಗುತ್ತದೆ. ಭತ್ತದ ಬೆಲೆಯನ್ನು ಸರ್ಕಾರ ಯಾವುದೋ ಒಂದು ಕಾಲದಲ್ಲಿ ೫೦–೫೨ ರೂಪಾಯಿ ಎಂದು ನಿಗದಿ ಮಾಡಿಕೊಂಡು ಬಂತು. ನಾನು ಮಂತ್ರಿಯಾಗಿ ಭತ್ತ ಬೆಳೆಯುವ ಪ್ರದೇಶಕ್ಕೆ ಹೋದಾಗ ೪೦–೪೨ ರೂಪಾಯಿಯಂತೆ ಸ್ಥಳೀಯ ಸಾಹುಕಾರ ವ್ಯಾಪಾರಸ್ಥರು ತೆಗೆದುಕೊಳ್ಳುತ್ತಾ ಇದ್ದಂಥ ಕಾಲದಲ್ಲಿ ಜನರು ಬಂದು ನನಗೆ ಅರ್ಜಿ ಕೊಟ್ಟರು. ನಾವು ಅವರಿಗೆ ಒಳ್ಳೆಯ ರೇಟು ಕೊಟ್ಟರೆ, ಅವರು ಏನು ಮಾಡುತ್ತಾರೆ ಎಂದರೆ, ಮಾರುಕಟ್ಟೆಗೆ ಹೆಚ್ಚಿಗೆ ಸರಕನ್ನು ತೆಗೆದುಕೊಂಡು ಬರದೆ, ಸರ್ಕಾರಕ್ಕೆ ಕೊಡುತ್ತಾರೆ. ಒಳ್ಳೆಯ ರೇಟನ್ನು ಕೊಡದಿದ್ದರೆ, ಮಾರುಕಟ್ಟೆಗೆ ಹೆಚ್ಚಿಗೆ ಸರಕು ಬರುತ್ತದೆ, ಆಗ ವ್ಯಾಪಾರಸ್ಥರು ಕಡಿಮೆ ಬೆಲೆಯಲ್ಲಿ ಕೊಂಡು ಕೊಳ್ಳುತ್ತಾರೆ. ಭತ್ತವನ್ನು ಕಡಿಮೆ ಬೆಲೆಗೆ ಕೊಂಡುಕೊಂಡು ಅಕ್ಕಿ ಮಾಡಿಸಿ ಹೆಚ್ಚಿನ ಬೆಲೆಯಲ್ಲಿ ವ್ಯಾಪಾರ ಮಾಡುತ್ತಾರೆ. ಇದು ಕಾಲಾಂತರ ದಲ್ಲಿ ನಡೆದುಕೊಂಡು ಬಂದಿರುತ್ತದೆ.

ಭಾರತದಲ್ಲಿಯೇ ಆಗಲೀ, ನಮ್ಮ ರಾಜ್ಯದಲ್ಲಿಯೇ ಆಗಲೀ, ಯಾವಾಗ ಬೆಳೆ

ಚೆನ್ನಾಗಿ ಆಗುತ್ತದೆ, ಆ ಕಾಲದಲ್ಲಿ ಬೆಲೆ ಸ್ಲಂಪ್ ಆಗುವುದು ಹಿಂದಿನ ಮೂರು ಕಟ್ಟೆಯ ಬೆಲೆಗಳನ್ನು ಅಧ್ಯಯನ ಮಾಡಿದ್ದರಿಂದ ಇದು ಗೊತ್ತಾಗುತ್ತದೆ.

ಬೆಲೆ ಏರುವಾಗ ರೈತರು ಸರ್ಕಾರಕ್ಕೆ ಧಾನ್ಯ ಕೊಡದಿದ್ದರೆ, ಆಹಾರ ಪದಾರ್ಥಗಳ ಅಭಾವ ಇರುವಾಗ ನಮಗೆ ಸಹಾಯ ಮಾಡದಿದ್ದರೆ ಬೆಲೆ ಕಡಿಮೆಯಾದಾಗ ತಮಗೆ ರಕ್ಷಣೆಬೇಕೆಂದು ಕೇಳಿದರೆ ನಮಗೆ ಕೋಪ ಬರುವುದು. ಅವರು ಈ ಸಂದರ್ಭದಲ್ಲಿ ಮುಂದೆ ಬಂದು ಸಹಾಯ ಮಾಡಬೇಕು. ಈಗ ನಿಗದಿ ಮಾಡುವ ಬೆಲೆಯನ್ನು ಕೇಂದ್ರ ಸರಕಾರದವರು ಕೊಡಲೀ, ಬಿಡಲಿ, ನಾವು ಮೂರು ವರ್ಷವಾದರೂ ಅದರಂತೆ ಕೊಟ್ಟುಕೊಂಡು ಹೋಗುತ್ತೇವೆ ಎಂಬ ಆಶ್ವಾಸನೆಯನ್ನು ರೈತರಿಗೆ ಬೆಳೆಗಾರರಿಗೆ ಕೊಡುತ್ತೇನೆ.

ಶ್ರೀ ಟಿ. ಎ ಮಂಜನಾಥ್.—೩ ವರ್ಷ ಬೆಲೆ ಇಳಿಯುವುದಿಲ್ಲ ಎಂಬುದು ತಮ್ಮಿಂದ ಗೊತ್ತಿದೆ. ಅದಕ್ಕೇ ಹೇಳುತ್ತೀರಿ.

ಶ್ರೀ ಡಿ. ದೇವರಾಜ ಅರಸ.—ಅದು ಹೇಗೆ ಗೊತ್ತು ? ಹಾಗೆ ಹೇಳಬೇಡಿ.

ಶ್ರೀ ಎಸ್. ಬಂಗಾರಪ್ಪ —ಅನುಭವದ ಮೇಲೆ ಹೇಳಿರುವುದು.

ಶ್ರೀ ಡಿ. ದೇವರಾಜ ಅರಸ.—ಜನರೆಲ್ಲಾ ತಿಳಿದುಕೊಂಡಿದ್ದಾರೆ. ಶ್ರೀ ಬಂಗಾರಪ್ಪನವರು ಬುದ್ಧಿವಂತರು ಎಂದು ನಾನು ತಿಳಿದುಕೊಂಡಿದ್ದೇನೆ. ಮುಂದೆ ಅವರಿಗೇ ಓಟು ಕೊಡಿ ಎಂದು ಹೇಳೋಣ.

Sri K. PUTTASWAMY.— From last year to this year, I may infarm the House from my experience that there is at least 50 per cent increase in the cost of cultivation.

Sri D. DEVARAJ URS.— That is so because the cost of cultivation has increased. Taking into consideration the increase in the cost of production, these prices have been fixed.

Sri K. PUTTASWAMY.— I am very happy that the Chief Minister and our Government are making their streneous efforts to give better prices to the agriculturists. On behalf of the agriculturists, I would like to make a humble submission that what the Government is likely to give has already been neutralised.

Sri D. DEVARAJ URS.— I do not like to get into a discussion about the cost charged. I have prepared a statement of cost charge. The rate we are going to give may not give him a good profit but it is going to cover the production cost. I have calculated Rs. 900 as cost for

cultivation of one acre. I am sure my hon. friend Sri Puttaswamy will agree with me if I say that it would not only cover the neutralisation but would also give him something more. Here is our Ex-Minister who himself is a cultivator. He can speak with authority about the cost per acre because he maintains proper accounts of everything he does.

ಶ್ರೀ ಸಿ. ಬೈರೇಗೌಡ.— ತಮ್ಮ ಪಕ್ಷದ ನೀತಿಯ ಪ್ರಕಾರ ಸರಕಾರ ಸಗಟು ವ್ಯಾಪಾರ ವಹಿಸಿಕೊಳ್ಳುವುದೇ ಎಂಬುದನ್ನು ತಿಳಿಸಬೇಕು. ಈ ವಿಷಯ ರಾಜ್ಯ ಸರಕಾರಗಳಿಗೆ ಸಂಬಂಧಪಟ್ಟಿರುವುದಾಗಿ ದೆಹಲಿಯಲ್ಲಿ ಹೇಳಿರುವುದಾಗಿ ವರದಿಯಾಗಿದೆ. ಇದರ ಬಗ್ಗೆ ಮೈಸೂರು ಸರಕಾರದ ನೀತಿಯೇನು, ಸರಕಾರ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವುದೇ, ಇಲ್ಲವೇ ಎಂಬುದನ್ನು ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ.— ಮೈಸೂರು ರಾಜ್ಯದಲ್ಲಿ ಸುಮಾರು ೪–೫ ಲಕ್ಷ ಟನ್ ರಿಗ್ಯುಲೇಟೆಡ್ ಮಾರ್ಕೆಟ್ ಮೂಲಕ ಹೋಲಸೇಲ್ ವ್ಯಾಪಾರಕ್ಕೆ ಬರುತ್ತದೆ ಎಂದು ಲೆಕ್ಕವಿದೆ. ನಾವು ಲೇವಿ ಹಾಕಿರುವುದು ಹೋಗಿ ಸರ್ಪ್ಲಸ್ ಇರುವುದು ಸುಮಾರು ಒಂದು ಲಕ್ಷ ಟನ್ನಿನಷ್ಟು ಮಾರ್ಕೆಟ್ಟಿಗೆ ಬರುವುದು

The object of taking over wholesale trade in rice is almost achieved by the scheme of things we have now proposed. Nowhere they have agreed for this compulsory levy.

ಶ್ರೀ ಸಿ.ಬೈರೇಗೌಡ.— ತಾಲ್ಲೂಕು ಬೋರ್ಡ ಅಧ್ಯಕ್ಷರು ಹೇಳುವ ರೀತಿಯಲ್ಲಿ ಸುಮಾರು ಇನ್ನೂರು ರೈತರು ಗೊಬ್ಬರಕ್ಕೆ ಬಂದಿದ್ದರು. ಸುಮಾರು ೩೯ ಜನರಿಗೆ ಈ ತಿಂಗಳು ಕೊಟ್ಟಿರಬಹುದು ಅವರಿಗೆ ೫–೧೦ ಕೆ. ಜಿ ಕೊಟ್ಟರೆ ಸಾಕಾಗುವುದಿಲ್ಲ. ಇಂದು ಒಂದು ಮೂಟೆಗೆ ೧೬೦ ರೂಪಾಯಿವರೆಗೆ ಬೆಲೆ ಇದೆ. ಜನರಿಗೆ ಕಷ್ಟವಾಗಿದೆ. ಸ್ವಲ್ಪ ಮಟ್ಟಿಗೆ ಮಳೆಯಾಗಿದೆ ಇಂದು ನಮ್ಮ ಪರಿಸ್ಥಿತಿಯೇನಾಗಿದೆ ಎಂದು ಪ್ರತಿ ನಿಮಿಷವೂ ನೋಡುತ್ತಿದ್ದೇವೆ. ನಾನು ಬರುವಾಗ ಕಂಡಿರುವುದನ್ನ ಹೇಳುತ್ತಿದ್ದೇನೆ. ಇಂದು ಬತ್ತಕ್ಕೆ ೭೦ ರೂಪಾಯಿ ಬೆಲೆ ನಿಗದಿ ಮಾಡಿದ್ದೀರಿ, ಸಂತೋಷ. ಅದೇ ರೀತಿಯಲ್ಲಿ ಗೊಬ್ಬರವನ್ನು ೪೮ ರಿಂದ ೫೦ ರೂಪಾಯಿಗಳ ಬೆಲೆಯಲ್ಲಿ ಒದಗಿಸಬೇಕು. ಹಾಗೆ ಒದಗಿಸದೆ ಬತ್ತ ಇಂಥ ಬೆಲೆಗೇ ಕೊಡಿ ಎಂದು ಕೇಳಲು ನೈತಿಕ ಬೆಂಬಲವೇನಿದೆ? ರೈತರಿಗೆ ಬೇಕಾಗಿರುವುದನ್ನು ಒದಗಿಸದೆ ಅವರಿಂದ ಧಾನ್ಯ ಕೇಳಲು ಹಕ್ಕೇನಿದೆ?

ಶ್ರೀ ಡಿ. ದೇವರಾಜ ಅರಸ.— ಈಗ ೧೭೦ ರೂಪಾಯಿಗಳಂತೆ ಯಾರು ಮಾರುತ್ತಿದ್ದಾರೆ ಎಂಬುದನ್ನು ಹೇಳಿ. ಅವರನ್ನು ಈ ದಿವಸ ಸಾಯಂಕಾಲದೊಳಗೆ ಹಿಡಿದು ತರಿಸುತ್ತೇನೆ. ಹೆಸರು ಕೊಡಿ.

ಶ್ರೀ ಸಿ. ಬೈರೇಗೌಡ — ಹೇಳುತ್ತೀನೆ. ಶಂಕರನಾರಾಯಣ ಶೆಟ್ಟಿ ಎನ್ನುವವರು ೧೦೦ ರೂಪಾಯಿ ಪ್ರಕಾರ ಮಾರುತ್ತಿದ್ದಾರೆ. ವಿಜಯಪುರ, ಬೈಲನರಸೀಪುರ ಮುಂತಾದ ಕಡೆಗಳಲ್ಲಿ ಆ ರೀತಿ ಮಾರುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ.— ಬರೆದುಕೊಡಿ. ಗೊಬ್ಬರದ ವಿಚಾರದಲ್ಲಿ ಸರಕಾರ ಒಂದು ನೀತಿಯನ್ನನುಸರಿಸಬೇಕೆಂದಿದೆ. ನಮಗೆ ಇನ್ನು ಮೇಲೆ ದೊರೆಯುವ ಗೌರವವನ್ನು ಮೊದಲು ಯಾರು ಲೆವಿ ಕೊಡುವರೋ ಅವರಿಗೆ ಸರಕಾರದ ಬೆಲೆಯಲ್ಲಿ ಮೊದಲು ಗೊಬ್ಬರ ಒದಗಿಸಬೇಕು. ಒಂದು ಕಾರ್ಡ್ ಪದ್ಧತಿಯ ಪ್ರಕಾರ ಒದಗಿಸಬೇಕು ಎಂಬ ನೀತಿ ಇದೆ, ಆ ಪ್ರಕಾರ ಮಾಡಬೇಕೆಂದಿದ್ದೇನೆ.

ಇನ್ನೊಂದು ವಿಚಾರ. ಎರಡು ಮೂರು ವರ್ಷ ಒಂದೇ ಬೆಲೆ ಇಡುವುದರಿಂದ ರೈತರಿಗೆ ಒಂದು ಗ್ಯಾರಂಟಿ ದೊರೆಯುವುದು, ಅವರು ಮುಂದೆ ಬರುವರು, ಲೆವಿ ಕೊಡುವರು. ಹೀಗೆ ಮಾಡಿದ ಮೇಲೆ ಬೇರೆ ಕಡೆ ಮಾರುವುದನ್ನು ಸರಕಾರಕ್ಕೆ ಕೊಡಲು ಕೆಲವು ಕಡೆ ರೈತರು ಮುಂದೆ ಬಂದರೆ ಅದೇನೂ ಆಶ್ಚರ್ಯವಲ್ಲ. ಈ ನಂಬಿಕೆಯಿದೆ. ಮಿಲ್ಲಿನ ಮೇಲೆ ಸಹ ಲೆವಿ ಹಾಕಿ ಪಡೆಯಬೇಕೆಂಬ ಅಭಿಪ್ರಾಯವಿದೆ. ಇದನ್ನೆಲ್ಲಾ ಮಾಡಿ ಮುಂದಿನ ವರ್ಷ ಜನರಿಗೆ ಹಂಚಲು ಆಹಾರವನ್ನು ಒದಗಿಸಿ ಕೊಳ್ಳಲಾಗುವುದು. ಅಲ್ಲದೆ ಕಾರಣಾಂತರದಿಂದ ತೊಂದರೆಯಾದರೆ ಸ್ವಲ್ಪ ಭಾಗ ದಾಸ್ತಾನಿಟ್ಟು ಒದಗಿಸುವುದಕ್ಕೆ ಸಹ ವ್ಯವಸ್ಥೆ ಮಾಡಲಾಗುವುದು ಇದಕ್ಕೆ ನಮ್ಮ ಎಲ್ಲಾ ಪ್ರತಿನಿಧಿಗಳೂ ಸಹಕರಿಸಬೇಕು. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ಹಳ್ಳಿಯ ಮಟ್ಟವಲ್ಲಿ ಇರುವ ಎಲ್ಲಾ ರೈತ ಮುಖಂಡರು ಪ್ರತಿನಿಧಿಗಳು ಇದಕ್ಕೆ ಸಹಕಾರ ಕೊಡಬೇಕು. ಅಹಾರದ ವಿಚಾರ ಯಾವುದೇ ಪಕ್ಷಕ್ಕೆ ಸಂಬಂಧಪಟ್ಟ ವಿಚಾರವಲ್ಲ. ಇದು ಎಲ್ಲರಿಗೂ ಸೇರಿದ ವಿಚಾರ. ಎಲ್ಲರೂ ಸಹಕರಿಸಿ ಇದು ಯಶಸ್ವಿಯಾಗುವಂತೆ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

MADAM SPEAKER.— The House stands adjourned to meet again tomorrow at 1 P. M.

[The House adjourned at Six of the Clock to meet again at One of the Clock on Tuesday the 25th September 1973.]

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ) 4905
Accession No.....
KSA LIBRARY, B'lore
B004905
328.32402 548 LAD, 1973
JJ40
-7-8-74